# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVIII - 5 ಮೇ 2001


## ಈ ಸಂಚಿಕೆಯಲ್ಲಿ


| | | |
|---|---|---|
| ಅಸೋಸಿಯೇಷನ್ನಿನಲ್ಲಿ | | 2 |
| ಕರ್ನಾಟಕ ಸಾಂಸ್ಕೃತಿಕ ಪರಂಪರೆ ೧೦ | ● ಸುಮಾದ್ವಾರಕಾನಾಥ್ | 4 |
| ಕೃತಿ ವಿಮರ್ಶೆ | | |
| ವಿನಾಯಕರ ಸಮಗ್ರ ವ್ಯಕ್ತಿತ್ವ ಅನಾವರಣ | | 7 |
| ಕವನ : | | |
| ಆಗಮನ | ● ಸಿ. ರಮೇಶ ಬಾಬು ಮುಂಬಯಿ | 7 |
| ಹೊರನಾಡಿನಲ್ಲಿ ಕನ್ನಡದ ಗೆಲುವು | ● ಡಾ. ಜಿ. ಎನ್. ಉಪಾಧ್ಯ | 8 |
| ಲಲಿತ ಪ್ರಬಂಧ: | | |
| ಈಚಲು ಮರದ ಕೆಳಗೆ | ● ಪು.ತಿ. ನರಸಿಂಹಾಚಾರ್ | 9 |
| ಕವನ ; | | |
| ಭವಾನಿ ಅಷ್ಟಕ | ● ಶ್ರೀ ಜಗದ್ಗುರು ಶಂಕರಾಚಾರ್ಯ | 12 |
| ಸುತ್ತ-ಮುತ್ತ | | 13 |



The Mysore Association, Mumbai

393, Bhaudaji Road, Matunga, Mumbai-400 019.

Tel.: 402 46 47 ● Grams: "KARUNADU"

# ಅಕ್ಷಯ ತೃತೀಯ

**ಅಸೋಸಿಯೇಶನ್ನಿನಲ್ಲಿ**

ಅಕ್ಷಯ ತೃತೀಯವು ಬಹು ಶ್ರೇಷ್ಠವಾದ ದಿನ. ವೈಶಾಖ ಶುದ್ಧ ತದಿಗೆಯಂದು ಅಕ್ಷಯ ತೃತೀಯಾ, ಶುಭಕಾರ್ಯಗಳನ್ನು ಆರಂಭಿಸಲು ಬಹು ಶ್ರೇಷ್ಠವಾದ ದಿನ. ಇಂದು ಬದರಿ ಕ್ಷೇತ್ರದಲ್ಲಿ ಆರು ತಿಂಗಳಿಂದ ಮುಚ್ಚಿದ ದೇವಸ್ಥಾನದ ಬಾಗಿಲನ್ನು ತೆರೆಯುತ್ತಾರೆ. ಜನರು ಬದರಿನಾರಾಯಣನ ದರ್ಶನಕ್ಕಾಗಿ ಕಿಕ್ಕಿರಿದು ನೆರೆದಿರುತ್ತಾರೆ. ಜೈನರು ಈ ದಿನ ತಮ್ಮ ಉಪವಾಸ ವ್ರತವನ್ನು ಸಮಾಪ್ತಿ ಮಾಡುತ್ತಾರೆ. ಅನೇಕ ಸ್ಥಳಗಳಲ್ಲಿ ಅವರವರ ಪದ್ಧತಿಗನುಗುಣವಾಗಿ ಈ ದಿನವನ್ನು ಆಚರಿಸುತ್ತಾರೆ.

ಇಂತಹ ಶುಭ ದಿನದಂದು ನಮ್ಮ ಅಸೋಸಿಯೇಷನ್ನಿನ ಗಣಪತಿಯನ್ನು ಪ್ರತಿಷ್ಠಾಪನೆ ಮಾಡಲಾಯಿತು. ಇಂದಿಗೆ ವರ್ಷಗಳಾದವು. ಏಪ್ರಿಲ್ 26ರಂದು ಅಕ್ಷತದಿಗೆ, ಪ್ರತಿ ವರ್ಷವೂ ಈ ದಿನವನ್ನು ಅಸೋಸಿಯೇಷನ್ನಿನ ಆಡಳಿತ ವರ್ಗದವರು ಹಾಗೂ ಸದಸ್ಯರೆಲ್ಲ ಸೇರಿ ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಈ ವರ್ಷವು ಪ್ರತಿವರ್ಷದಂತೆ



*ಡಾ. ಸುಬ್ರಹ್ಮಣ್ಯ ದಂಪತಿಗಳು ಗಣಪತಿ ಹೋಮವನ್ನು ಮಾಡುತ್ತಿರುವುದು.*

ಸಾಯಂಕಾಲ 5-30ರ ವೇಳೆಗೆ ಕಾರ್ಯಕ್ರಮವು ಆರಂಭವಾಯಿತು. ಗಣಪತಿ ಹೋಮ ಮತ್ತು ಪೂಜೆಯು ಸಾಂಗವಾಗಿ ನೆರವೇರಿತು. ಡಾ. ಸುಬ್ರಹ್ಮಣ್ಯಂ ದಂಪತಿಗಳು ಕುಳಿತುಪೂಜೆ ಹಾಗೂ ಹೋಮವನ್ನು ನಡೆಸಿಕೊಟ್ಟರು. ನಂತರ ಮಹಾಮಂಗಳಾರತಿಯಾಯಿತು. ಭೋಜನದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು. ಎಲ್ಲರಿಗೂ ಪ್ರಸಾದ ವಿತರಣೆಯಾಯಿತು.

- ರಮಾವಸಂತ

# ಸಂಸ್ಕೃತಿಯನ್ನು ಉಳಿಸಿಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ

## - ಕೆ.ಸಿ. ರಾಮಮೂರ್ತಿ




*ವಿಮರ್ಶಕರಾಗಿ ಶ್ರೀ ಟಿ.ಎನ್. ಅಶೋಕ್ ಹಾಗೂ ಶ್ರೀಮತಿ ಜಯಶ್ರೀ ಅರವಿಂದ್ ಅವರು ಶ್ರೀ ರಾಮಮೂರ್ತಿ ಅವರೊಡನೆ.*

ಮುಂಬಯಿ: ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ನಮ್ಮ ಬದುಕಿಗೆ ದಾರಿದೀಪವಾಗಬಲ್ಲ; ನಮ್ಮ ಹಿರಿಯರ ಅನುಭವ, ವಿಚಾರಗಳಿಗೆ ವಿಶೇಷವಾದ ಮಹಲಿಕತೆಯಿದೆ. ಈ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಸಂಘ ಸಂಸ್ಥೆಗಳ ಹೊಣೆ ಗುರುತರವಾದುದು ಎಂದು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕ ಶ್ರೀ ಕೆ.ಸಿ. ರಾಮಮೂರ್ತಿ ಅವರು ಅಭಿಪ್ರಾಯಪಟ್ಟರು.

ಅವರು ಇತ್ತೀಚೆಗೆ ಮೈಸೂರು ಅಸೋಸಿಯೇಶನ್ ಆಯೋಜಿಸಿದ್ದ 'ವೀಣೆ ಸಾರ್ವಭೌಮ ವಾದ್ಯ'ದಂಥ ಕೃತಿ ವಿಮರ್ಶೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ 'ವೀಣೆ ಸಾರ್ವಭೌಮ ವಾದ್ಯ' ಅತ್ಯುತ್ತಮ ಕೃತಿಯೊಂದನ್ನು ವೈಣಿಕ ವಿದ್ವಾನ್ ಸಿ.ಕೆ. ಶಂಕರ ನಾರಾಯಣನ್ ರಾವ್ ಅವರು ರಚಿಸಿರುವುದು ಅಭಿಮಾನದ ಸಂಗತಿ. ಹೊರನಾಡಿನಲ್ಲಿದ್ದುಕೊಂಡು ಅವರು ಕನ್ನಡ ನಾಡು ನುಡಿ ಸಾಹಿತ್ಯ ಸಂಸ್ಕೃತಿಯ ಕಂಪನ್ನು, ಕರ್ನಾಟಕ ಸಂಗೀತದ ಅದರಲ್ಲಿಯೂ ಕ್ಲಿಷ್ಟವಾದ ವೀಣೆಯ ಕುರಿತಾದ ಎಲ್ಲಾ ವಿವರಗಳನ್ನು ಈ ಕೃತಿಯಲ್ಲಿ ನೀಡಿದ್ದಾರೆ. ಕರ್ನಾಟಕ ಸರಕಾರ ಹೊರನಾಡ ಕನ್ನಡಿಗರ ಕಷ್ಟ ಸುಖಗಳಿಗೆ ತೆರೆದ ಮನಸ್ಸಿನಿಂದ ಸ್ಪಂದಿಸುತ್ತಿದೆ. ಬೆಂಗಳೂರಿನಲ್ಲಿ ಕನ್ನಡದ ಹೆಸರಿನಲ್ಲಿ ಕೆಲವರು ಶ್ರೀಮಂತರಾಗಿದ್ದಾರೆ. ಹೊರನಾಡಿನಲ್ಲಿನ ಕನ್ನಡಿಗರ ಅದರಲ್ಲೂ ಮುಂಬಯಿ ಕನ್ನಡಿಗರ



ಶ್ರೀ ರಾಮ ಮೂರ್ತಿಯವರು ವಿದ್ವಾನ್ ಶಂಕರನಾರಾಯಣ ರಾವ್ ಅವರನ್ನು ಶಾಲು ಹೊದಿಸಿ ಸನ್ಮಾನಿಸುತ್ತಿರುವುದು.

ಕ್ರಿಯಾಶಕ್ತಿಯ ಪ್ರತೀಕವಾಗಿ ಇಲ್ಲಿ ಅನೇಕ ಸಂಘ ಸಂಸ್ಥೆಗಳ ಕನ್ನಡದ ಏಳಿಗೆಗೆ ಶ್ರಮಿಸುತ್ತಿರುವುದು ಸಂತೋಷದ ಸಂಗತಿ ಎಂದವರು ಮೆಚ್ಚುಗೆ ವ್ಯಕ್ತಪಡಿಸಿದರು. ಮೈಸೂರು ಅಸೋಸಿಯೇಷನ್ ಒಂದು ಮಾದರಿ ಸಂಸ್ಥೆ. ನಮ್ಮ ಸಂಸ್ಕೃತಿಯ ಉತ್ಕರ್ಷಕ್ಕೆ ಈ ಸಂಸ್ಥೆ ಮಾಡುತ್ತಿರುವ ಕಾರ್ಯ ಶ್ಲಾಘನೀಯ. ಮುಂದಿನ ಜನಾಂಗಕ್ಕೆ, ಅರ್ಥಾತ್ ನಮ್ಮ ಮಕ್ಕಳಿಗೆ ನಮ್ಮ ಸಾಹಿತ್ಯ, ನಾಡು, ಕಲೆ, ಭಾಷೆಯ ಬಗೆಗೆ ಅಭಿಮಾನ ಮೂಡಿಸುವ ಕೆಲಸವಾಗಬೇಕು ಎಂದು ಅಭಿಪ್ರಾಯಪಟ್ಟರು.

ವಿದ್ವಾನ್ ಸಿ.ಕೆ. ಶಂಕರ ನಾರಾಯಣ ರಾವ್ ಅವರು ರಚಿಸಿರುವ ವೀಣೆ ಸಾರ್ವಭೌಮ ವಾದ್ಯ ಒಂದು ಗಮನಾರ್ಹ ಕೃತಿ. ಸರಳವಾಗಿ ಸ್ವಾರಸ್ಯ ಪೂರ್ಣವಾಗಿ ವೀಣೆಯನ್ನು ಕಲಿಯುವ ವಿದ್ಯಾರ್ಥಿಗಳಿಗೆ, ಕಲಾವಿದರಿಗೆ, ಜನಸಾಮಾನ್ಯರಿಗೆ ಇದು ಉಪಯುಕ್ತವಾಗಿದೆ. ಈ ವಾದ್ಯದ ಎಲ್ಲಾ ಸಮಗ್ರ ವಿವರಗಳು ಇಲ್ಲಿ ದಾಖಲಾಗಿದೆ. ವಿವಿಧ ಸ್ಥಾಯಿಗಳಿಂದ ನಾದೋತ್ಪತ್ತಿಯ ವಿಚಾರಗಳು, ಕೈ ಚಳಕ ಕ್ರಮ, ವಿದ್ವಾಂಸರ ಬಾಣಿ, ಹಾಡುವ ಕ್ರಮ, ತಾನ ಎಲ್ಲವೂ ಇಲ್ಲಿ ಬಿಡಿ ಬಿಡಿಯಾಗಿ ಕೊಡಲಾಗಿದೆ. ವೀಣೆ ನಡೆದು ಬಂದ ಪರಂಪರೆಯನ್ನು ಈ ಕೃತಿ ನಮಗೆ ಅಧಿಕೃತವಾಗಿ ತಿಳಿಸಿ ಕೊಡುತ್ತದೆ ಎಂದು ಮುಂಬಯಿ ಆಕಾಶವಾಣಿಯ ಹಿರಿಯ ಕಲಾವಿದ ಅಧಿಕಾರಿ ಶ್ರೀ ಟಿ.ಎನ್. ಅಶೋಕ್ ಅವರು ಅಭಿಪ್ರಾಯಪಟ್ಟರು.

ಕಲಾವಿದೆ ಶ್ರೀಮತಿ ಜಯಶ್ರೀ ಅರವಿಂದ ಅವರು ಮಾತನಾಡಿ ಯಾವುದೇ ಕಲೆ ಇರಲಿ ಅಲ್ಲಿ ಸಿದ್ಧಾಂತ ಮತ್ತು ಪ್ರಯೋಗಗಳ ನಡುವೆ ಸಾಕಷ್ಟು ಹೊಂದಾಣಿಕೆ ಇರಬೇಕು. ವೀಣೆಯ ಅಭ್ಯಾಸಿಗಳಿಗೆ ಇದೊಂದು ಆಕರ ಗ್ರಂಥ ಎಂದು ನುಡಿದರಲ್ಲದೆ ವಿದ್ವಾನ್ ಸಿ.ಕೆ. ಶಂಕರನಾರಾಯಣ ರಾವ್ ಅವರಂಥ ಗುರುಗಳು ಬಹಳ ವಿರಳ ಎಂದು ಅವರ ವ್ಯಕ್ತಿತ್ವದ ಹಿರಿಮೆಯನ್ನು ಗುಣಗಾನ ಮಾಡಿದರು. ಕೃತಿಯನ್ನು ರಚಿಸಿದ ವಿದ್ವಾನ್ ಸಿ.ಕೆ. ಶಂಕರ ನಾರಾಯಣ ರಾವ್ ಅವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಶ್ರೀಮತಿ ಭಾರತಿ ಪ್ರಸಾದ್ ಅವರು ಸ್ವಾಗತ ಗೀತೆಯನ್ನು ಪ್ರಸ್ತುತಪಡಿಸಿದರು. ಪ್ರಸ್ತಾವಿಕವಾಗಿ ಮಾತನಾಡುತ್ತಾ ಮೈಸೂರು ಅಸೋಸಿಯೇಶನ್‌ನ ಕಾರ್ಯದರ್ಶಿ ಶ್ರೀ ಎಂ.ಎ.ಎನ್. ಪ್ರಸಾದ್ ಅವರು ಇದೊಂದು ವಿಶಿಷ್ಟ ಕಾರ್ಯಕ್ರಮ ಮುಂಬಯಿಯಲ್ಲಿದ್ದುಕೊಂಡು ವೀಣೆಯ ಕುರಿತು ಅಭ್ಯಾಸ ಪೂರ್ಣವಾದ ಕೃತಿಯನ್ನು ರಚಿಸಿದ ಸಿ.ಕೆ. ಶಂಕರ ನಾರಾಯಣ ರಾಯರನ್ನು ಗೌರವಿಸುವ, ಅವರ ಕೃತಿಯ ಮಹತ್ವವನ್ನು ಇಲ್ಲಿನ ಮಿತ್ರರಿಗೆ ತಿಳಿಯಪಡಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಅನಂತರ ಕಲಾವಿದೆ ಜಯಶ್ರೀ ಅರವಿಂದ್ ಮತ್ತು ಬಳಗದವರ ವೀಣಾ ವಾದನ ಕಾರ್ಯಕ್ರಮ ನಡೆಯಿತು. ಇದಕ್ಕೂ ಮುಂಚೆ ಕೆ.ಸಿ. ರಾಮಮೂರ್ತಿ ಅವರೊಂದಿಗೆ ಸಂವಾದ ಕಾರ್ಯವನ್ನು ವ್ಯವಸ್ಥೆಗೊಳಿಸಲಾಗಿತ್ತು. ಮುಂಬಯಿಯ ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ●

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

Agents For
INDIAN AIRLINES &
JET AIRLINES

**REGD. OFFICE :**
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

**ALSO AT :**
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750



ಮುಂಬಯಿಯ ಅನೇಕ ಕನ್ನಡ ಸಂಸ್ಥೆಗಳ ಮುಖಂಡರೊಡನೆ ಶ್ರೀ ರಾಮಮೂರ್ತಿ ಅವರು ಸಮಾಲೋಚನೆ ನಡೆಸುತ್ತಿರುವುದು.

ಕರ್ನಾಟಕ ಸಾಂಸ್ಕೃತಿಕ ಪರಂಪರೆ ೧೦

# ಕೆಳದಿ ಸಂಸ್ಥಾನ

ಸುಮಾ ದ್ವಾರಕನಾಥ

ವಿಜಯ ನಗರದ ಪತನಾನಂತರ ಕೆಲವೇ ದಶಕಗಳಲ್ಲಿ ಕರ್ನಾಟಕವು ಮುಖ್ಯವಾಗಿ ಮೂರು ಆಡಳಿತಗಳಿಗೆ ಒಳಗಾಯಿತು. ಅವೇ ವಿಜಾಪುರ, ಕೆಳದಿ ಮತ್ತು ಮೈಸೂರು ಸುಮಾರು ಎರಡೂವರೆ ಶತಮಾನಗಳ ಕಾಲ ವಿಜೃಂಭಿಸಿದ ಈ ಕೆಳದಿ ಸಂಸ್ಥಾನದ ಅರಸರು ಹಿಂದೂ ಧರ್ಮ ಸಂಸ್ಕೃತಿಗಳನ್ನು ರಕ್ಷಿಸಿ ಪೋಷಿಸಿದ್ದಾರೆ. ಅವರ ಚಟುವಟಿಕೆಗಳ ಕೇಂದ್ರವಾಗಿದ್ದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಕೆಳದಿರಾಜ್ಯ ಇಂದು ಒಂದು ಕುಗ್ರಾಮ ಮಾತ್ರವಾಗಿ ಉಳಿದಿದೆ. ಎರಡನೆಯ ರಾಜಧಾನಿ ಇಕ್ಕೇರಿ ಆಗಿದ್ದುದರಿಂದ ಇವರನ್ನು ಇಕ್ಕೇರಿಯ ನಾಯಕರೆಂದೂ ಕರೆಯುವುದುಂಟು. ಹಿಂದೊಮ್ಮೆ (೧೪೬೬ - ೧೭೬೩) ಈ ಕೆಳದಿ ರಾಜ್ಯ ಕೊಡಗು, ಹಾಸನ, ಚಿಕ್ಕ ಮಗಳೂರು, ಚಿತ್ರದುರ್ಗ ಕರಾವಳಿಯಲ್ಲಿ ಗೋವೆಯಿಂದ ಕೇರಳದ ಕಣ್ಣಾನೂರು ವರೆಗೂ ವಿಸ್ತರಿಸಿದ್ದಿತು.

ಆಧಾರಗಳು : ಕೆಳದಿ ಅರಸರ ಇತಿಹಾಸ ರಚನೆಯಲ್ಲಿ ನಮಗೆ ವಿವಿಧ ಬಗೆಯ ಮೂಲಾಧಾರಗಳು ಉಪಯುಕ್ತವಾಗಿವೆ. ಲಿಂಗಣ್ಣ ಕವಿ ವಿರಚಿತ 'ಕೆಳದಿ ನೃಪ ವಿಜಯಂ' ಕನ್ನಡ ಚಂಪಕ ಕಾವ್ಯದಲ್ಲಿದೆ. ಮರಾಠರ ದಾಖಲೆಯ ಕಾಗದ ಪತ್ರಗಳು, ಗೋವಾದಲ್ಲಿ ಪೋರ್ಚುಗೀಸರ ಮತ್ತು ತಲಚೇರಿಯಲ್ಲಿರುವ ಬ್ರಿಟಿಷರ ದಾಖಲೆಗಳು, ಯಾತ್ರಿಕರ ವರದಿಗಳು ಹಾಗೂ ಕೆಳದಿ ಸಂಸ್ಥಾನದಲ್ಲಿ ಪ್ರಾಪ್ತವಾಗಿರುವ ಅನೇಕ ಶಾಸನಗಳೂ ಸಹಾಯಕವಾಗಿವೆ.

ಮೂಲ : ಕೆಳದಿ ಗ್ರಾಮದ ವೀರಶೈವ ನಾಯಕ ಚೌಡಪ್ಪ ಎಂಬಾತನು ಕೆಳದಿ ಪಾಳೆಯದ ಸ್ಥಾಪಕ. ಪ್ರಜಾನುರಾಗಿ ಸುಮಾರು ೧೪ ವರುಷಗಳ ವರೆಗೆ ರಾಜ್ಯಭಾರಮಾಡಿದನು. ಇವನ ಮಗ ಸದಾಶಿವ ನಾಯಕನು ಕೆಳದಿ ಅರಸರಲ್ಲಿಯೇ ಗಣ್ಯನು ಪರಾಕ್ರಮಿಯೂ ಆಗಿದ್ದನು. "He was one of the less known able rulers of India" ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ನಂತರ ಇವನ ಮಕ್ಕಳಲ್ಲಿ ಹಿರಿಯನಾದ ದೊಡ್ಡ ಸಂಕಣ್ಣ ನಾಯಕ, ಅವನ ತಮ್ಮ ಚಿಕ್ಕ ಸಂಕಣ್ಣನಾಯಕನ ಆಡಳಿತದ ನಂತರ ವೆಂಕಟಪ್ಪ ನಾಯಕನೂ ಆಳಿದರು. ಇವರ ಹೆಸರು ಕೆಳದಿ ಅರಸರ ಇತಿಹಾಸದಲ್ಲಿ ಮುಖ್ಯವಾದುದು. ಈ ತನಕ ಕಾಲದಲ್ಲಿ ರಾಜ್ಯದ ಸಂಪತ್ತು ಅಧಿಕಗೊಂಡು ರಾಜ್ಯ ಪ್ರಬಲವಾಯಿತು. ೧೬೨೩ರಲ್ಲಿ ಇಕ್ಕೇರಿಗೆ ಭೇಟಿ ನೀಡಿದ ಇಟಲಿಯ ಪ್ರವಾಸಿ ಪಿಟ್ರೋ ಡೆಲ್ಲಾವಲ್ಲೆ ಅರಸನ ಸಾಮರ್ಥ್ಯಗಳ ಬಗ್ಗೆ ಗುಣಗಾನ ಮಾಡಿದ್ದಾನೆ. ಕೆಳದಿನ ಅರಸರಲ್ಲೇ ದಕ್ಷನೂ ಪರಾಕ್ರಮಶಾಲಿಯೂ ಆದವನೆಂದರೆ ಶಿವಪ್ಪ ನಾಯಕ. ಇವನ ಆಳ್ವಿಕೆಯಲ್ಲಿ ಕೆಳದಿ ಅರಸರ ಕೀರ್ತಿ ಉನ್ನತ ಮಟ್ಟಕ್ಕೇರಿತು. ಶಿವಪ್ಪ ನಾಯಕನ ವ್ಯಕ್ತಿತ್ವ ಬಹುಮುಖವಾದುದು ಕರ್ನಾಟಕ ರಾಜಕೀಯದ ಅವನತಿಯ ಕಾಲದಲ್ಲಿ ಆತ ಅಧಿಕಾರಕ್ಕೆ ಬಂದು ಆ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ ದಿಟ್ಟಾತನದಿಂದ ಹೋರಾಡಿದನು. ಪರಾಕ್ರಮಿಯಾಗಿದ್ದಂತೆ ರಾಜ್ಯವನ್ನು ವ್ಯವಸ್ಥೆಗೊಳಿಸುವ ದಕ್ಷತೆಯಲ್ಲಿ ಅದ್ವಿತೀಯನಾಗಿದ್ದನು. ಕಂದಾಯದ ವಸೂಲಿಯಲ್ಲಿ ಆತನು ಮಾಡಿದ ಮಾರ್ಪಾಡು ಮತ್ತು ಆತನು ಹಾಕಿಕೊಟ್ಟ ಮಾರ್ಗ ಇಂದಿನ ಆರ್ಥಿಕ ತಜ್ಞರ ಮೆಚ್ಚುಗೆಯನ್ನು ಪಡೆದಿವೆ. "ಶಿವಪ್ಪನಾಯಕನ ಶಿಸ್ತು" ಎಂಬುದು ದುಸಾದೆಯ ಮಾತಾಗಿ ಪರಿಣಮಿಸಿದೆ. ಒಟ್ಟಿನಲ್ಲಿ ಕೆಳದಿಯ ವೀರ ಪರಂಪರೆಗೆ ಕಳಸ ಪ್ರಾಯವಾಗಿ ಶಿವಪ್ಪ ನಾಯಕ ಕಂಗೊಳಿಸುತ್ತಿದ್ದಾನೆ.

ಒಂದೇ ಕೇಳಿ ಬರುವ ಹೆಸರೆಂದರೆ ಸೋಮಶೇಖರ ನಾಯಕನ ರಾಣಿ ಹೆಸರಾಂತ ಬಿದನೂರಿನ ಚೆನ್ನಮ್ಮಾಜಿ, ಔರಂಗದಾಳಿಯಿಂದ ತತ್ತರಿಸಿ ಓಡಿಬಂದು ಆಶ್ರಯ ಬೇಡಿದ ಮರಾಠರ ರಾಜಾರಾಮನಿಗೆ ನೀಡಿದ ರಕ್ಷಣೆ ಕನ್ನಡದ ವೀರ ಮಹಿಳೆ ತೋರಿದ ಧೈರ್ಯ ಸಾಹಸಕ್ಕೆ ಒಂದು ನಿದರ್ಶನವಾಗಿದೆ. ಇದರಿಂದ ಈ ಕನ್ನಡ ವೀರ ಮಣಿಯ ಕೀರ್ತಿ ಉತ್ತರ ಭಾರತದಲ್ಲೂ ಹರಡಿತು. ಮುಂದೆ ಆಳಿದ ಸೋಮಶೇಖರ ನಾಯಕ ಹಾಗೂ ವೀರಮ್ಮಾಜಿ ಹೆದರನಿಗೆ ಸೆರೆಸಿಕ್ಕ ಕೆಳದಿ ರಾಜ್ಯ ಮೈಸೂರಿನಲ್ಲಿ ವಿಲೀನವಾಯಿತು.

ಆಡಳಿತ : ಶಿವಪ್ಪ ನಾಯಕನ ಕಾಲದಲ್ಲಿ ನಡೆದ ಭೂಸುಧಾರಣೆಗೆ ಒಂದು ಹೊಸ ಮಾರ್ಪಾಡನ್ನೇ ತಂದಿತು. ಭೂಮಿಗಳನ್ನು ಸರ್ಕಾರದ ವೆಚ್ಚದಿಂದ ಕೃಷಿ ಮಾಡಿಸಿ ರಾಜ್ಯಾದಾಯವನ್ನು ವೃದ್ಧಿಗೊಳಿಸುವ ಏರ್ಪಾಡು ಮಾಡಿದನು. ಜಮೀನುಗಳನ್ನು ಐದು ಭಾಗವಾಗಿ ವಿಂಗಡಿಸಿ ಆಯಾ ಭೂಮಿಯ ಉತ್ಪತ್ತಿ ಪ್ರಮಾಣದ ಆಧಾರದ ಮೇಲೆ ಕಂದಾಯ ನಿಗದಿ ಪಡಿಸಿದನು. ಮಲೆನಾಡಿನ ಸಮೃದ್ಧಿಗೆ ಅವನ ಯತ್ನಗಳು ಕಾರಣವಾಗಿದ್ದು ಬುಕಾನನ್ ಹಾಗೂ ರೈಸರು 'ಸಿಸ್ತನ್ನು' ಸ್ತುತಿಸಿದ್ದಾರೆ.

ಸಾಂಸ್ಕೃತಿಕ ಕೊಡುಗೆ : ವೆಂಕಟಪ್ಪ ನಾಯಕ ತನ್ನ ರಾಜ್ಯದಲ್ಲಿ ಶಿ. ಬರೇಶ್ವರ, ವಿಶ್ವೇಶ್ವರ, ಲಕ್ಷ್ಮೀನಾರಾಯಣ, ತಾಂಡವೇಶ್ವರ, ರಂಗನಾಥ ಮುಂತಾದ ಅನೇಕ ದೇವಾಲಯಗಳನ್ನು ನಿರ್ಮಿಸಿದನು. ಶೃಂಗೇರಿಯಲ್ಲಿ ಒಂದು ಮಠವನ್ನು ಕಟ್ಟಿಸಿ ಅಲ್ಲಿನ ಗುರುಗಳಾಗಿದ್ದ ಅಭಿನವ ನರಸಿಂಹ ಭಾರತಿಗಳಿಗೆ ಅದನ್ನು ಒಪ್ಪಿಸಿ "ಶೃಂಗೇರಿಯ ಪುನರ್ ನಿರ್ಮಾಪಕ" ಎಂಬ ಬಿರುದು ಪಡೆದ ವಿದ್ಯಾಭಿಮಾನಿಯಾದ ಈತನು ಅನೇಕ ಅಗ್ರಹಾರಗಳ ಸ್ಥಾಪನೆಗೆ ಕಾರಣನಾದನು. ಇವನ ಆ ಸ್ಥಾನದಲ್ಲಿದ್ದ ತಿರುಮಲಭಟ್ಟನು 'ಶಿವಗೀತ' ಮತ್ತು 'ಶಿವ ಅಷ್ಟಪದಿ'ಗಳನ್ನು ರಚಿಸಿದನು. ರಂಗನಾಥ ದೀಕ್ಷಿತನ ತಂತ್ರಸಾರ, ಅಶ್ವಪಂಡಿತನ 'ಮಾನಪ್ರಿಯ ಭಟ್ಟೋಜಿ ದೀಕ್ಷಿತನ' 'ತತ್ವ ಕೌಸ್ತುಭ' ಇದೇ ಕಾಲದಲ್ಲಿ ರಚಿತವಾದುವು. ಬಸಪ್ಪ ನಾಯಕನು ಪಂಡಿತನೂ, ಧರ್ಮದೃಷ್ಟಿ ಉಳ್ಳವನೂ ಆಗಿದ್ದನು. ಪ್ರಸಿದ್ಧವಾದ 'ಶಿವ ತತ್ವ ರತ್ನಾಕರ'ದ ಕರ್ತೃ ಈತನೇ ಎಂದು ತಿಳಿದು ಬರುತ್ತದೆ. ಸುರದ್ರುಮ ಮತ್ತು 'ಸೂಕ್ತಿ ಸುಧಾಕರ' ಎಂಬ ಗ್ರಂಥಗಳೂ ಈತನ ಹೆಸರಿನಲ್ಲಿವೆ. ವಿದ್ವಾಂಸರಿಗೆ ಕೊಡುತ್ತಿದ್ದ ಪ್ರೋತ್ಸಾಹ 'ಸೂರಿಜನ ಕಲ್ಪದ್ರುಮ' ಎಂಬ ಬಿರುದನ್ನು ಈತನಿಗೆ ತಂದು ಕೊಟ್ಟಿತು.

ವ್ಯಾಪ್ತಿಯಲ್ಲಿ ಚಿಕ್ಕದಾದ ಈ ಕೆಳದಿ ಸಂಸ್ಥಾನ ಸಾಧಿಸಿದುದು ಅಪಾರ ವಿಜಯ ನಗರ ಸಾಮ್ರಾಜ್ಯದ ಧ್ಯೇಯ ಧೋರಣೆಗಳನ್ನೇ ಹೊತ್ತು ನಿಂತ ಇದು ಕರ್ನಾಟಕಕ್ಕೆ ಅಮೂಲ್ಯ ಕಾಣಿಕೆ ನೀಡಿದೆ. ಆಡಳಿತದಲ್ಲಿ ವಿಜಯನಗರದ ಮಾದರಿಯೇ ಮುಂದುವರಿಯಿತು. ಕೆಳದಿಯ ಅರಸರು ವೀರಶೈವರು ಅವರ ಧಾರ್ಮಿಕ ನಿಷ್ಠೆ, ಉದಾರತೆಯಿಂದಾಗಿ ಇಲ್ಲಿನ ಸಾಂಸ್ಕೃತಿಕ ಸಂಪತ್ತು ಮತ್ತಷ್ಟು ಹೆಚ್ಚಿತು. ಧಾರ್ಮಿಕ ಸಹಿಷ್ಣುಗಳಾದ ಕೆಳದಿ ಅರಸರು ಎಲ್ಲಾ ಧರ್ಮಗಳನ್ನೂ ಸಮಾನ ದೃಷ್ಟಿಯಿಂದ ಕಂಡವರು, ಶೃಂಗೇರಿಯ ಶಾರದಾ ಪೀಠ ಮತ್ತು ಉಡುಪಿಯ ದ್ವೈತ ಮತಗಳಿಗೆ ಇವರು ನೀಡಿದ ಆಶ್ರಯ, ಪ್ರೋತ್ಸಾಹ ಮತ್ತು ದಾನ ದತ್ತಿಗಳು ಸ್ತುತ್ಯರ್ಹ ಚೆನ್ನಮ್ಮಾಜಿ. ಮಂಗಳೂರಿನಲ್ಲಿ ಕ್ರೈಸ್ತ ದೇವಾಲಯ ನಿರ್ಮಾಣಕ್ಕಾಗಿ ಒಂದು ನಿವೇಶನ ನೀಡಿದರೆ,

ವೆಂಕಟಪ್ಪ ಮೂಡಬಿದರೆಯ ಜೈನ ಬಸದಿಗೆ ದತ್ತಿ ನೀಡಿದನು. ಭುವನಗಿರಿ ದುರ್ಗದ ಬಳಿ ಮಸೀದಿ ನಿರ್ಮಿಸಿ ಅದಕ್ಕೆ ದತ್ತಿ ನೀಡಿದವರೂ ಕೆಳದಿ ಅರಸರೇ ಕೆಳದಿ, ಇಕ್ಕೇರಿ, ಬಿದನೂರು, ಕೊಲ್ಲೂರುಗಳಲ್ಲಿ ಅವರು ನಿರ್ಮಿಸಿರುವ ದೇವಾಲಯಗಳು ಚಾಲುಕ್ಯ, ಹೊಯ್ಸಳ ಮತ್ತು ವಿಜಯನಗರ ಶೈಲಿಯಲ್ಲಿವೆ. (ವೇಸರ ಮತ್ತು ದ್ರಾವಿಡ ಶೈಲಿ) ಮಂಗಳೂರು, ಭಟ್ಕಳ, ಹೊನ್ನಾವರ ಮುಂತಾದ ಭಾಗಗಳಿಂದ ವಿದೇಶಗಳಿಗೆ ಸಂಬಾರ ಪದಾರ್ಥ, ಅಕ್ಕಿ, ಅಡಕೆ, ತೆಂಗು ಮುಂತಾದವು ರಫ್ತಾಗುತ್ತಿದ್ದವು. ''ವರಹ'' ಹೊನ್ನು, ಧರಣ, ಹಣ, ಮುಪ್ಪಗೆ, ಅಡ್ಡ, ಹಗ, ಬೆಳೆ, ವಿಸ, ಅರವಿಸ ಮತ್ತು ಕಾಸು ಎಂಬ ವಿವಿಧ ಬಗೆಯ ನಾಣ್ಯಗಳು ಬಳಕೆಯಲ್ಲಿದ್ದವು.

ಹೀಗೆ ಧೀರ್ಘಕಾಲ ಸಾರ್ಥಕ ಜೀವನವನ್ನು ಬಾಳಿದ ಈ ಚಿಕ್ಕ ಸಂಸ್ಥಾನ ಕೊನೆಯಲ್ಲಿ ಮೈಸೂರಿನ ಒಂದು ಭಾಗವಾಗಿ ಪರಿಣಮಿಸಿತು.

## ಮೈಸೂರಿನ ಒಡೆಯರು

ಹದಿನಾರನೇ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದ ಒಡೆಯರ ಮನೆತನದ ಅರಸರು ತಮ್ಮದೇ ಆದ ವಿಶಿಷ್ಟ ಇತಿಹಾಸವನ್ನು ಹೊಂದಿದ್ದಾರೆ. ಸುಮಾರು ಐದು ಶತಮಾನಕ್ಕೂ ದೀರ್ಘಕಾಲ ಆಳಿದ ಇಪ್ಪತ್ತೈದು ಮಂದಿ ಒಡೆಯರುಗಳು ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ಹಿರಿಮೆಯಲ್ಲಿ ವಿಜಯನಗರದ ಸಾಮ್ರಾಜ್ಯದಷ್ಟು ಔನ್ನತ್ಯಕ್ಕೇರದಿದ್ದರೂ ಅದೇಧ್ಯೇಯ ಧೋರಣೆಗಳನ್ನು ಮೈಸೂರು ಹೊತ್ತು ನಿಂತುದು ಇಲ್ಲಿಗಮನಾರ್ಹವಾಗಿದೆ.

ಆರಂಭದಲ್ಲಿ ವಿಜಯನಗರದ ಮಂಡಲಿಕರಾಗಿದ್ದು ಈ ಮೈಸೂರರಸರು ಮುಂದೆ ತಾವು ಸ್ವತಂತ್ರರಾದಾಗ ದಕ್ಷಿಣ ಕರ್ನಾಟಕ ಮತ್ತು ತಮಿಳುನಾಡಿನ ಕೆಲವು ಭಾಗಗಳ ಸ್ವಾಮಿಗಳಾದರು. ಮುಂದೆ ಹೈದರ್, ಟಿಪ್ಪುಗಳ ಕಾಲಕ್ಕೆ ಹೆಚ್ಚು ಕಡಿಮೆ ಇಡೀ ಕರ್ನಾಟಕವೂ, ಆಂಧ್ರತಮಿಳುನಾಡು ಮತ್ತು ಕೇರಳದ ಭಾಗಗಳೂ ಅವರ ವಶಕ್ಕೆ ಬಂದವು. ಅನೇಕ ಶಾಸನಗಳು, ಅರಮನೆಯ ವಿಪುಲ ದಾಖಲೆಗಳು ಕಂಠೀರವನರಸರಾದ ವಿಜಯರ 'ಚಿಕ್ಕ ದೇವರಾಜ ಬಿನ್ನಪರ' 'ಚಿಕ್ಕ ದೇವರಾಜ ವಂಶಾವಳಿ ') ಮುಂತಾದ ಸಾಹಿತ್ಯಿಕ ಮೂಲಗಳೂ ಇವೆ. ಆ ಕಾಲದ ಪರ್ಶಿಯಾನ್, ಫ್ರೆಂಚ್, ಇಂಗ್ಲೀಷ್, ಕನ್ನಡ, ಮರಾಠಿ, ತಮಿಳು, ತೆಲುಗು ಭಾಷೆಗಳ ದಾಖಲೆಯ ರಾಶಿಯೇ ಇದೆ.

ಮೂಲ ಕ್ರಿ.ಶ. ೧೩೯೯ರಲ್ಲಿ ಮೈಸೂರು ಪ್ರದೇಶಕ್ಕೆ ಆಗಮಿಸಿದ ಯದುರಾಯ ಮತ್ತು ಕೃಷ್ಣರಾಯ ಎಂಬ ಸಹೋದರರೇ ಮೈಸೂರು ಒಡೆಯರ ಮೂಲ ಪುರುಷರು. ಕ್ರಿ.ಶ. ೧೪೦೦ರಲ್ಲಿ ಅಭಿಷಕ್ತನಾದ ಯದುರಾ ಸುಮಾರು ೨೪ ವರ್ಷಗಳಕಾಲ ರಾಜ್ಯವಾಳಿದನು. ಅನಂತರ ಅಧಿಕಾರಕ್ಕೆ ಬಂದ ಇವನ ಮಗ ಬೆಟ್ಟದ ಚಾಮರಾಜ ಒಡೆಯರು ಸುಮಾರು ೨೪ ವರ್ಷ ರಾಜ್ಯವಾಳಿದರು. ತರುವಾಯ ತಿಮ್ಮರಾಜ ಒಡೆಯರು, ಬೋಳ ಚಾಮರಾಜ ಒಡೆಯರು, ಮೂರನೆಯ ಚಾಮರಾಜ ಒಡೆಯರು ಕ್ರಮವಾಗಿ ಆಳ್ವಿಕೆ ನಡೆಸಿದರು.

ಮೈಸೂರಿನ ಆರಂಭದ ಅರಸರಲ್ಲಿ ಅತ್ಯಂತ ಪರಾಕ್ರಮ ಮತ್ತು ದಕ್ಷ ಆಡಳಿತಗಾರರಾದವರೆಂದರೆ ಕಂಠೀರವನರಸರಾಜ ಒಡೆಯರು ಯುದ್ಧ ವಿದ್ಯೆ ಹಾಗೂ ಕತ್ತಿವರಸೆಯಲ್ಲಿ ಸರಿಸಮಾನರೇ ಇರಲಿಲ್ಲ. 'ರಣಧೀರ' ಎಂಬ ಬಿರುದನ್ನೂ ಗಳಿಸಿದ್ದರು. 'ಕಂಠೀರವಪಣ' ಎನ್ನುವ ನಾಣ್ಯವನ್ನೂ ಹೊರಡಿಸಿದ್ದಾರೆ. ಗೋವಿಂದ ವೈದ್ಯ ಪಂಡಿತನು 'ಕಂಠೀರವನರಸರಾಜ ವಿಜಯ'ವೆಂಬ ಸಾಂಗತ್ಯಕಾವ್ಯ ರಚಿಸಿದ್ದಾನೆ. 'ಬೇಹಾರ ಗಳಿತ'ದ ಕರ್ತೃ ಭಾಸ್ಕರ, ಮಾರ್ಕಾಂಡೇಯ ರಾಮಾಯಣದ ಕರ್ತೃ ತಿಮ್ಮರಸರಾಜರ ಆಶ್ರಿತ ಕವಿಗಳ ಚಿಕ್ಕ ದೇವರಾಜ ಒಡೆಯರು ಮೈಸೂರು ಅರಸರೆಲ್ಲೆಲ್ಲಾ ಬಹು ಪ್ರಸಿದ್ಧರಾದವರು. ಕನ್ನಡ ಸಾಹಿತ್ಯಕ್ಕೆ ಇವರು ಕೊಟ್ಟ ಪ್ರೋತ್ಸಾಹ, ಸಾಹಿತ್ಯ ಚರಿತ್ರೆಯಲ್ಲಿ ಇವರಿಗೆ ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ. ಸುಮಾರು ಮೂವತ್ತೊಂದು ವರ್ಷಗಳ ಕಾಲ ದರ್ಪದಿಂದ ಯಶಸ್ವಿಯಾಗಿ ರಾಜ್ಯಭಾರ ಮಾಡಿದರು. ಚಿಕ್ಕಂದಿನಲ್ಲೇ ಉತ್ತಮ ಶಿಕ್ಷಣದ ಫಲವಾಗಿ ರಾಜ್ಯಾಡಳಿತದಲ್ಲಿ ಮಾತ್ರವಲ್ಲದೆ ಕಲೆ, ಸಾಹಿತ್ಯ ಮುಂತಾದ ಸಾಂಸ್ಕೃತಿಕ ವಿಚಾರಗಳಲ್ಲಿ ಅಪಾರ ಅಭಿರುಚಿಹೊಂದಿದ್ದರು. ಇವರ ಮರಣಾನಂತರ ಆರು ದಶಕಗಳ ಕಾಲ ದುರ್ಬಲರಾದ ಅರಸರೇ ಆಳಿ ದಳವಾಯಿಯೆಂಬ ಅಧಿಕಾರಿಗಳೇ ಅಧಿಕಾರ ನಡೆಸುವಂತೆ ಆಯಿತು. ರಾಜ್ಯ ದಳವಾಯಿಗಳ ಮರಣಾನಂತರ ೧೭೬೧ರಲ್ಲಿ ಹೈದರ್ ಆಲಿಯ ನೇಮಕವಾಗಿ ಅಧಿಕಾರ ಸೂತ್ರ ಪಡೆದು ೨೦ ವರ್ಷ ಆಳಿದುದಲ್ಲದೆ ಅವನ ಮಗ ಟಿಪ್ಪು ಸುಲ್ತಾನ್ ೧೭ ವರ್ಷಗಳ ಕಾಲ ಮೈಸೂರನ್ನು ಆಳಿದನು. ಈ ಅವಧಿಯಲ್ಲಿ ಒಡೆಯರು ಪದಚ್ಯುತರಾಗಿದ್ದರು.

ಹೈದರ್ ಆಲಿಯು ೧೮ನೇ ಶತಮಾನದ ಅತ್ಯಂತ ಆಕರ್ಷಕ, ಧೈರ್ಯಶಾಲಿ, ಚಾಣಾಕ್ಷ, ಬುದ್ಧಿವಂತ ರಾಜನಾಗಿದ್ದ. ಅವನಿಗೆ ಓದು ಬರಹ ಬಾರದಿದ್ದರೂ ಅಸಮಾನ್ಯವಾದ ಸ್ಮರಣ ಶಕ್ತಿ ಇತ್ತು. ಅವನು ರಾಜಕೀಯ ಹಾಗೂ ಯುದ್ಧ ವಿದ್ಯೆಯ ರಂಗಗಳಲ್ಲಿ ಪ್ರವೀಣನಾಗಿದ್ದ. ಅವನ ನಾಯಕತ್ವದಲ್ಲಿ ಮೈಸೂರು ಸೈನ್ಯ ಯುದ್ಧ ವಿದ್ಯೆಯಲ್ಲಿ ಇಡೀ ಭಾರತಕ್ಕೇ ಪಾಠ ಶಾಲೆಯಾಯಿತು. ಹೈದರನ ಕಾಲದಲ್ಲಿ ಮೈಸೂರು ರಾಜ್ಯ ತನ್ನ ಗಾತ್ರದಲ್ಲಿ ಎರಡು ಪಟ್ಟಿಗೂ ಹೆಚ್ಚು ವರಮಾನವೂ ೧೧೦ ಲಕ್ಷ ವರಾಹಕ್ಕೇರಿತು. ದಕ್ಷಿಣ ಭಾರತದಲ್ಲಿ ಬ್ರಿಟಿಷರ ವಿಸ್ತರಣೆಯನ್ನು ಯಶಸ್ವಿಯಾಗಿ ತಡೆದಿದ್ದು ಹಾಗೂ ಒಂದೇ ರಾಜ್ಯದ ಅಡಿಯಲ್ಲಿ ಇಡೀ ಕರ್ನಾಟಕವನ್ನು ಒಂದು ಗೂಡಿಸಿದ್ದು ಹೈದರನ ವಿಶೇಷವಾದ ಸಾಧನ. ಹೈದರನಲ್ಲಿದ್ದ ರಾಷ್ಟ್ರಾಭಿಮಾನ ಮತ್ತು ಸ್ವಾಭಿಮಾನ ಇಂಗ್ಲೀಷ್‌ರನ್ನು ತಲ್ಲಣಗೊಳಿಸಿದ್ದಿತು. ಗುರಿಸಾಧನೆಗಾಗಿ ತನ್ನ ಅಂತ್ಯದವರೆಗೂ ಅವಿಶ್ರಾಂತವಾಗಿ ಹೋರಾಡಿದ ಹೈದರ್ ಕರ್ನಾಟಕ ಇತಿಹಾಸದಲ್ಲಿ ಮರೆಯಲಾಗದ ವ್ಯಕ್ತಿಯಾಗಿದ್ದಾನೆ.

ಬ್ರಿಟಿಷರಿಗೆ ಪ್ರಬಲ ಪ್ರತಿರೋಧವನ್ನು ಒಡ್ಡಿದ ದೃಷ್ಟಿಯಿಂದ, ಟಿಪ್ಪು ಸುಲ್ತಾನನ ಆಳ್ವಿಕೆ ಸಂಕ್ಷಿಪ್ತವಾದರೂ ಪ್ರಮುಖವಾಗಿದೆ. ಬ್ರಿಟಿಷರನ್ನು ತನ್ನ ಪರಮ ಶತ್ರುಗಳು ಎಂದು ತಿಳಿದಿದ್ದ ಅವನು ಅವರನ್ನು ಈ ದೇಶದಿಂದ ಹೊರಗಟ್ಟುವುದೇ ತನ್ನ ಬದುಕಿನ ಕರ್ತವ್ಯವೆಂದು ತಿಳಿದು ಅದಕ್ಕಾಗಿ ತನ್ನ ಪ್ರಾಣವನ್ನು ತ್ಯಾಗ ಮಾಡಿದ ಕರ್ನಾಟಕದ ಇತಿಹಾಸದಲ್ಲಿ ಟಿಪ್ಪು ಸುಲ್ತಾನನು ತಂದೆಗಿಂತ ಭಿನ್ನವಾದ ಸ್ಥಾನವನ್ನು ಗಳಿಸಿಕೊಂಡಿದ್ದಾನೆ. ಮಹತ್ವಾಕಾಂಕ್ಷೆಯಿಂದ ಕೂಡಿದ್ದ ಇವನು ತಂದೆಯ ನೀತಿಗಳನ್ನು ಮುಂದುವರೆಸಿದನಾದರೂ ಪರಿಸ್ಥಿತಿ ಅವನಿಗೆ ಪ್ರತಿಕೂಲವಾಯಿತು. ಬ್ರಿಟಿಷರನ್ನು ಭಾರತದಿಂದ ಓಡಿಸಬೇಕೆಂಬ ದೃಢ ಸಂಕಲ್ಪದಿಂದಲೇ ಹೋರಾಡಿದ ಟಿಪ್ಪು ಬ್ರಿಟೀಷರಿಗೆ ಸಿಂಹ ಸ್ವಪ್ನನಾಗಿದ್ದು ''ಮೈಸೂರಿನಹುಲಿ'' ಎಂದೇ ಪ್ರಸಿದ್ಧನಾಗಿದ್ದ. ಇವನು ವಿದ್ಯಾವಂತ ಆದರೆ ತಂದೆಯಂತೆ ಚತುರನಾಗಿರಲಿಲ್ಲ. ಒಟ್ಟಿನಲ್ಲಿ ಅವನ ಆಡಳಿತ ಸಮರ್ಥವಾದುದು, ''ನಿಯಮ ಬದ್ಧವಾದ, ಸತ್ವಶಾಲಿಯಾದ ಹೈದರನ ಆಡಳಿತ ವ್ಯವಸ್ಥೆ ಅವನ ಮಗನ ಕೈಯಲ್ಲಿ ಇನ್ನೂ ಹೆಚ್ಚು ಸಮರ್ಥವೂ ಸುವ್ಯವಸ್ಥಿತವೂ ಆಗಿದೆ ಎಂದು ಮುನ್ರೋ ಆಗ ಹೇಳಿದ್ದರು.

ಟಿಪ್ಪುವಿನ ಪತನದ ನಂತರ ಇಂಗ್ಲಿಷರು ಹಳೆಯ ರಾಜಮನೆತನವನ್ನು ಮತ್ತೆ ಮೈಸೂರಿನಲ್ಲಿ ಸ್ಥಾಪಿಸಿ

...ನೆಯ ಕೃಷ್ಣರಾಜ ಒಡೆಯರನ್ನು ಮೈಸೂರಿನ ರಾಜನಾಗಿಯೂ, ಪೂರ್ಣಯ್ಯನನ್ನು ದಿವಾನರನ್ನಾಗಿಯೂ ಮಾಡಿದರು. ೧೮೧೧ರಿಂದ ೧೮೩೧ರ ವರೆಗಿನ ೨೦ ವರ್ಷಗಳ ಈತನ ಆಳ್ವಿಕೆ ರಾಜಕೀಯವಾಗಿ ಮಹತ್ವಪೂರ್ಣವಾಗಿಲ್ಲದಿದ್ದರೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಮನಾರ್ಹವಾಗಿತ್ತು. ಮೂವತ್ತು ವರ್ಷಗಳಿಗೂ ಹೆಚ್ಚು ಕಾಲ ನಿಜನಾಗಿದ್ದು ಸುಮಾರು ೩೭ ವರ್ಷಗಳ ಕಾಲ ಹಕ್ಕಿನ ಆಡಳಿತಗಾರನಾಗಿದ್ದು ಇತಿಹಾಸದಲ್ಲಿ ಅತಿ ದೀರ್ಘಕಾಲ ಆಳ್ವಿಕೆ ನಡೆಸಿ ಮುಮ್ಮಡಿ ಕೃಷ್ಣರಾಜ ೧೮೬೮ರಲ್ಲಿ ನಿಧನ ಹೊಂದಿದನು.

ಮುಮ್ಮಡಿ ಕೃಷ್ಣರಾಜ ಒಡೆಯರು ಕಾಲವಾದ ಮೇಲೆ ೧೮೮೧ರ ಮಾರ್ಚ್ ಇಪ್ಪತ್ತೈದರಂದು ವೈಸ್ರಾಯ್ ರಿಪ್ಪನ್‌ನ ಆಜ್ಞೆಯ ಮೇರೆಗೆ ಅವರ ದತ್ತು ಪುತ್ರ ಹತ್ತನೇ ಚಾಮರಾಜ ಒಡೆಯರಿಗೆ ಮೈಸೂರಿನ ಅಧಿಕಾರವನ್ನು ಮರಳಿಸಲಾಯಿತು. ಇಲ್ಲಿಗೆ ಬ್ರಿಟಿಷ್ ಕಮೀಷನರ್‌ಗಳ ಆಡಳಿತ ಕೊನೆಗೊಂಡರೂ ಕೆಲವು ಕರಾರಿನ ಪ್ರಕಾರ ಆಡಳಿತದಲ್ಲಿ ಬ್ರಿಟಿಷರ ಪ್ರತಿನಿಧಿ 'ರೆಸಿಡೆಂಟ್' ಎಂಬ ಅಧಿಕಾರಿಯ ಪಾತ್ರವೂ ಇದ್ದಿತು. ಸಿ. ರಂಗಾಚಾರ್ಲು, ಸರ್. ಕೆ. ಶೇಷಾದ್ರಿ ಅಯ್ಯರ್, ಸರ್ ಎಂ. ವಿಶ್ವೇಶ್ವರಯ್ಯ ಸರ್. ಮಿರ್ಜಾ ಇಸ್ಮಾಯಿಲ್ ದಿವಾನರಾಗಿ ಮೈಸೂರು ರಾಜ್ಯವನ್ನು ಮಾದರಿ ರಾಜ್ಯವಾಗಿ ಮಾಡಿದರು. ಆಧುನಿಕ ಜಗತ್ತಿನಲ್ಲಿ ತನ್ನದೇ ಆದ ವಿಶಿಷ್ಟ ಮಟ್ಟದ ಪ್ರಗತಿಪರ ಯೋಜನೆಗಳನ್ನು ಮೈಸೂರು ಪಡೆಯಲು ನಾಲ್ಮಡಿಕೃಷ್ಣರಾಜ ಒಡೆಯರು ಕಾರಣ ಪುರುಷರು. ಇವರ ಅವಿಶ್ರಾಂತ ದುಡಿಮೆ ಮತ್ತು ಆಡಳಿತದಲ್ಲಿ ಒದಗಿ ಬಂದ ದಿವಾನರುಗಳ ಪರಿಶ್ರಮದಿಂದಾಗಿ ಮೈಸೂರು ಒಂದು ಮಾದರಿ ಸಂಸ್ಥಾನವಾಗಿ ಬೆಳಗುವಂತಾಯಿತು. ಕೃಷ್ಣರಾಜ ಒಡೆಯರಿಗೆ ಮಕ್ಕಳಿಲ್ಲದ ಪ್ರಯುಕ್ತ ಯುವರಾಜ ನರಸಿಂಹರಾಜರ ಪುತ್ರ ಜಯಚಾಮರಾಜ ಒಡೆಯರು ಉತ್ತರಾಧಿಕಾರಿಯಾಗಿ ೧೯೪೦ರಲ್ಲಿ ಪಟ್ಟವೇರಿದರು. ಮೈಸೂರಿನ್ನಾಳಿದ ಯದು ವಂಶೀಯರಲ್ಲಿ ಇವರು ಇಪ್ಪತ್ತೈದನೆಯ ಹಾಗೂ ಕೊನೆಯ ಅರಸರು. ದೇಶದಲ್ಲಿ ಸ್ವಾತಂತ್ರ್ಯ ಹೋರಾಟ ನಡೆದಿದ್ದು, ಪ್ರಜಾಪ್ರಭುತ್ವ ತತ್ವದ ಅನುಷ್ಠಾನದಲ್ಲಿ ಭಾರತೀಯ, ರಾಷ್ಟ್ರೀಯ ಕಾಂಗ್ರೆಸ್ ಹಾಕಿದ ಪ್ರಯತ್ನದಲ್ಲಿ ೧೯೪೭ರಲ್ಲಿ ಬದಲಾಗುತ್ತಿರುವ ಪರಿಸ್ಥಿತಿಯ ಪ್ರಜ್ಞೆ ಹೊಂದಿದ್ದು, ತಮ್ಮ ಸಂಸ್ಥಾನಗಳನ್ನು ಭಾರತೀಯ ಏಕತೆಯಲ್ಲಿ ವಿಲೀನಗೊಳಿಸುವುದು ಸ್ವಯಂ ಪ್ರೇರಣೆಯಿಂದ ಮುಂದೆ ಬಂದ ಭಾರತೀಯ ಅರಸರಲ್ಲಿ ಜಯಚಾಮರಾಜ ಒಡೆಯರ್ ಮೊದಲಿಗರು. ಇದು ಒಡೆಯರಿಗೆ ಇಡೀ ದೇಶದ ಮನ್ನಣೆ ಹಾಗೂ ಗೌರವವನ್ನು ತಂದುಕೊಟ್ಟಿತು. ಅರಸೊತ್ತಿಗೆಗಳಲ್ಲಿ ಕೊನೆಗೊಂಡು ಪ್ರಜಾಪ್ರಭುತ್ವ ತತ್ವವನ್ನು ಒಪ್ಪಿಕೊಂಡು ಕೇಂದ್ರ ಸರಕಾರದಲ್ಲಿ ಲೀನವಾದುವು. ಅನಂತರ ಆಡಳಿತದ ಅನುಕೂಲಕ್ಕಾಗಿ ಭಾಷಾವಾರು ಪ್ರಾಂತಗಳು ರಚಿತವಾದಾಗ ದೀರ್ಘಕಾಲ ಹರಿದು ಹಂಚಿ ಹೋಗಿದ್ದ ಕರ್ನಾಟಕ ಭಾಗಗಳು ಒಂದಾದವು. ಕರ್ನಾಟಕ ಏಕೀಕರಣ ಕನ್ನಡಿಗರ ಅತಿ ದೊಡ್ಡ ವಿಜಯ. ಕೇವಲ ಒಂಬತ್ತು ಜಿಲ್ಲೆಗಳ ಸಣ್ಣ ರಾಜ್ಯವೊಂದು ಹತ್ತೊಂಬತ್ತು ಜಿಲ್ಲೆಗಳ, ಹಿಂದಿನ ಎರಡೂವರೆಯಷ್ಟು ದೊಡ್ಡ ರಾಜ್ಯವಾಯಿತು. ೧೯೭೩ರ ನವೆಂಬರ್‌ನಲ್ಲಿ ಮೈಸೂರು ರಾಜ್ಯಕ್ಕೆ 'ಕರ್ನಾಟಕ'ವೆಂದು ಹೆಸರಾಯಿತು.

ಆಡಳಿತ : ರಾಜ್ಯವ್ಯವಸ್ಥೆಯಲ್ಲಿ ಚಿಕ್ಕದೇವರಾಜ ಒಡೆಯರು ಚಾಣಾಕ್ಷರೆಂದು ಹೆಸರು ಪಡೆದಿದ್ದರು. ಪ್ರಥಮಬಾರಿಗೆ ಅಂಚೆ ವ್ಯವಸ್ಥೆ ಜಾರಿಗೆ ತಂದು ರಾಜ್ಯದ ಎಲ್ಲ ಮೂಲೆಗಳಿಂದಲೂ ಶೀಘ್ರಗತಿಯಲ್ಲಿ ವರ್ತಮಾನ ಸಂಗ್ರಹಿಸುತ್ತಿದ್ದರು. ನಿರ್ದಿಷ್ಟ ಪ್ರಮಾಣದ ತೆರಿಗೆಗಳನ್ನು ಕಟ್ಟುನಿಟ್ಟಾಗಿ ಸಂಗ್ರಹಿಸಿ ಮಿತವ್ಯಯ ಮತ್ತು ದಕ್ಷ ವ್ಯವಸ್ಥೆಗಳಿಂದ ರಾಜ್ಯ ಭಂಡಾರವನ್ನು ಶ್ರೀಮಂತಗೊಳಿಸಿದರು. ಮೈಸೂರು ಸೈನಿಕರ ಶಿಸ್ತು ಮತ್ತು ಸಾಮರ್ಥ್ಯವನ್ನು ಬ್ರಿಟಿಷ್ ಸೇನಾಪತಿಗಳೇ ಪ್ರಶಂಸಿಸಿದ್ದಾರೆ. ಪ್ರಜಾಪತಿ ನಿಧಿಸಭೆಯ ಸದಸ್ಯರ ಹೆಸರುಗಳನ್ನು ಗೆಜೆಟ್‌ನಲ್ಲಿ ಪ್ರಕಟಿಸುವ ಪರಿಪಾಠ ಆರಂಭಿಸಿದ (೧೮೮೭) ಅವರು ೧೮೯೧ರಿಂದ ಚುನಾವಣಾ ಪದ್ಧತಿಯನ್ನು ಸದಸ್ಯರ ಆಯ್ಕೆಗಾಗಿ ಜಾರಿಗೆ ತಂದರು. ತಾಲ್ಲೂಕು ಬೋರ್ಡುಗಳ ಸ್ಥಾಪನೆ ಇವರ ಇನ್ನೊಂದು ಸಾಧನೆ. ವಿದ್ಯುದ್ದೀಪ ಪಡೆದ ಭಾರತದ ಮೊದಲ ಪಟ್ಟಣ ಬೆಂಗಳೂರಾಯಿತು. ನಾಲ್ಮಡಿ ಕೃಷ್ಣ ರಾಜ ಒಡೆಯರು ಆಧುನಿಕ ಭಾರತದ ತಿಳಿವಳಿಕಸ್ಥ ಸಂಸ್ಥಾನಿಕ ಅರಸರಲ್ಲಿ ಒಬ್ಬರೆಂದು ಖ್ಯಾತರಾಗಿದ್ದಾರೆ. ಸರ್ ವಿಶ್ವೇಶ್ವರಯ್ಯನವರ ಕಾಲದಲ್ಲಿ ರಾಜ್ಯದ ಸರ್ವ ವಿಧದ ಬೆಳವಣಿಗೆಯ ಯುಗ ಆರಂಭವಾಯಿತು. ಕೈಗಾರಿಕೆಯ ಕ್ಷೇತ್ರ ವಿಶೇಷವಾಗಿ ಬೆಳೆಯಿತು. ''ಆಧುನಿಕ ಮೈಸೂರಿನಲ್ಲಿ'' ಎಂದು ಹೆಸರು ಪಡೆದಿದ್ದರು.

ಸಾಹಿತ್ಯ : ಚಿಕ್ಕ ದೇವರಾಜರ ಆಸ್ಥಾನ ಅನೇಕ ವಿದ್ವಾಂಸರರಿಂದ ತುಂಬಿತ್ತು. ಕವಿ ತಿರುಮಲಾರ್ಯ, ಅವನ ಸೋದರ ಸಿಂಗಾರಾರ್ಯ ಚಿಕುಪಾಧ್ಯಾಯ, ತಿಮ್ಮಕವಿ ಮಲ್ಲಿಕಾರ್ಜುನ, ಲಕ್ಷ್ಮೀಶ, ಸಂಚಿಯ ಹೊನ್ನಮ್ಮ ಮುಂತಾದ ಪ್ರಮುಖ ಕನ್ನಡ ಬರಹಗಾರರು ಆಶ್ರಯ ಪಡೆದಿದ್ದರು. 'ಹದಿಬದೆಯ ಧರ್ಮ', 'ಜೈಮಿನಿ ಭಾರತ', 'ಅಪ್ರತಿಮವೀರ ಚರಿತ', 'ಮಿತ್ರಾ ವಿಂದ ಗೋವಿಂದ' 'ಚಿಕ್ಕ ದೇವರಾಜ ಬಿನ್ನಪ' ಮುಂತಾದವು ಈ ಕಾಲದ ಪ್ರಮುಖ ಕೃತಗಳು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರಿನ ಇತಿಹಾಸಕ್ಕೆ ಸಂಬಂಧಪಟ್ಟ ಅನೇಕ ಗ್ರಂಥಗಳು ರಚಿತವಾದುವು. ಕೆಂಪುನಾರಾಯಣನ 'ಮುದ್ರಾ ಮಂಜೂಷ' ದೇವಚಂದ್ರನ ರಾಜಾವಳೀ ಕಥೆ, ಮುಮ್ಮಡಿ ಕೃಷ್ಣರಾಜ ಒಡೆಯರ 'ತತ್ವನಿಧಿ' ಮೊದಲಾದ ೫೦ ಕೃತಿಗಳು, 'ದತ್ತಾತ್ರೇಯ ಮಾರ್ಗ ಮತ್ತು ಧ್ಯೇಯ' ಒಡೆಯರ್ ಬರೆದ ಅತ್ಯುತ್ತಮ ಕೃತಿ. ಒಡೆಯರ್ ಪ್ರೋತ್ಸಾಹದಿಂದ ಕನ್ನಡಿಸಿದ ಕೃತಿಗಳ ಸಂಖ್ಯೆ ೩೦೦ಕ್ಕೂ ಹೆಚ್ಚು.

ಸಾಂಸ್ಕೃತಿಕ ಕೊಡುಗೆ : ಟಿಪ್ಪುವಿನ ಕಲಾಭಿರುಚಿಗೆ ಶ್ರೀರಂಗಪಟ್ಟಣದಲ್ಲಿ ನಿರ್ಮಿಸಿರುವ 'ದರಿಯಾ ದೌಲತ್' ಅರಮನೆಯನ್ನು ಹುಲಿಯ ಚಿನ್ನದ ತಲೆಯ ಆ ಕೃತಿಯನ್ನುಳ್ಳ ಸಿಂಹಾಸನವನ್ನೂ ಉದಾಹರಿಸಬಹುದು. ಲಾಲ್‌ಬಾಗನ್ನು ಅಭಿವೃದ್ಧಿಗೊಳಿಸಿದ ಕೀರ್ತಿ ಟಿಪ್ಪುಗೇ ಸಲ್ಲುವಂತಹುದು. ಮುಮ್ಮಡಿ ಕೃಷ್ಣರಾಜ ಒಡೆಯರು ಕಲಾಭಿಜ್ಞರು, ಸಂಗೀತ ಪ್ರೇಮಿಯೂ, ವಿದ್ವಾಂಸರಿಗೆ ಆಶ್ರಯದಾತರೂ ಆಗಿದ್ದರು. ವೈದ್ಯರು, ಜ್ಯೋತಿಷಿಗಳು, ಕುಶಲ ಕಲಾವಿದರು, ಸಂಗೀತಗಾರರೂ ಅಧಿಕ ಸಂಖ್ಯೆಯಲ್ಲಿದ್ದು ಅರಸರಿಂದ ಪ್ರೋತ್ಸಾಹಿತರಾಗಿದ್ದರು. ಧರ್ಮಶ್ರದ್ಧೆ, ಸಾಹಿತ್ಯಾಭಿರುಚಿ, ಕಲೆ, ಸಂಗೀತ, ತತ್ವ ವಿಚಾರಗಳಲ್ಲಿ ಅಪಾರ ಒಲವಿದ್ದ ಒಡೆಯರ್ ಪಾಶ್ಚಾತ್ಯ ದೇಶಗಳಲ್ಲಿ ಆ ಬಗ್ಗೆ ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡಿದುದು ಇಲ್ಲಿ ಸ್ಮರಣೀಯ. ವಿದ್ಯಾಪಕ್ಷಪಾತಿಯಾಗಿದ್ದ ಜಯಚಾಮರಾಜ ಒಡೆಯರ್ ಮೈಸೂರಿನಲ್ಲಿ ತಮ್ಮ ಅನೇಕ ಬಂಗಲೆಗಳನ್ನು ಶಿಕ್ಷಣ ಸಂಸ್ಥೆಗಳಿಗಾಗಿ ಬಿಟ್ಟುಕೊಟ್ಟರು. ಆಧುನಿಕ ಭಾರತದ ಪ್ರಮುಖ ನಿರ್ಮಾತೃಗಳಲ್ಲೊಬ್ಬರಾದ ಸರ್ ಎಮ್. ವಿಶ್ವೇಶ್ವರಯ್ಯನವರು ಕರ್ನಾಟಕದ ಹೆಮ್ಮೆಯ ಕಣ್ಮಣಿ.

ಹೀಗೆ ಮೈಸೂರು ಅರಸು ಮನೆತನದ ಒಡೆಯರು ತಮ್ಮ ಮಿತಿಯಲ್ಲೇ ''ನವ ಕರ್ನಾಟಕ''ದ ಸಾಧನೆಗೆ ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ.

# ವಿನಾಯಕರ ಸಮಗ್ರ ವ್ಯಕ್ತಿತ್ವದ ಅನಾವರಣ.

**ವಿ.ಕೃ. ಗೋಕಾಕ**
**ಡಾ. ಜೀವಿ ಕುಲಕರ್ಣಿ**
**ನವಕರ್ನಾಟಕ ಸಾಹಿತ್ಯ ಸಂಪದ**
**ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ**
**ಪುರಸ್ಕೃತ ಕನ್ನಡ ಲೇಖಕರು ಮಾಲಿಕೆ**
**ಬೆಂಗಳೂರು 2001 ಬೆಲೆ ರೂ. 60**

'ವಿ.ಕೃ. ಗೋಕಾಕ' ಡಾ. ಜೀವಿ ಕುಲಕರ್ಣಿ ಅವರ ಇತ್ತೀಚಿನ ಕೃತಿ. ಕನ್ನಡ ಸಾಹಿತ್ಯದ ಲೋಕದಲ್ಲಿನ ತಮ್ಮ ವಿಶಿಷ್ಟ ಸಾಧನೆಗಳಿಂದ ಕನ್ನಡ ಜನಮನವನ್ನು ಸೂರೆಗೊಂಡವರೂ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಸಾಹಿತಿಗಳ ಜೀವನ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿ ಕೊಡುವ ಹೊಣೆಯನ್ನು ನವಕರ್ನಾಟಕ ಪ್ರಕಾಶನ ಕೈಗೆತ್ತಿಕೊಂಡಿದೆ. ಆ ಮಾಲಿಕೆಯಲ್ಲಿ 'ಜೀವಿ' ಅವರು ಬರೆದ ಪ್ರಸ್ತುತ ಕೃತಿ ಬೆಳಕು ಕಂಡಿದೆ. 'ವಿನಾಯಕ' ಕಾವ್ಯ ನಾಮದಿಂದ ಖ್ಯಾತರಾದ ಸಮನ್ವಯಾಚಾರ್ಯ ಗೋಕಾಕರು ಕವಿಗಳಾಗಿ, ವಿಮರ್ಶಕರಾಗಿ, ನಾಟಕಕಾರರಾಗಿ, ಕಾದಂಬರಿ ಕಾರರಾಗಿ, ಶಿಕ್ಷಣ ತಜ್ಞರಾಗಿ, ಆಂಗ್ಲ ಪ್ರಾಧ್ಯಾಪಕರಾಗಿ, ಕನಸಿಗರಾಗಿ, ಆದರ್ಶ ಜೀವಿಗಳಾಗಿ ಕಾಲ ಪ್ರವಾಹದ ಮರಳ ದಂಡೆಯಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಶಾಶ್ವತವಾಗಿ ಮೂಡಿಸಿದ ಬಗೆಯನ್ನು ಡಾ| ಜಿ.ವಿ. ಕುಲಕರ್ಣಿ ಅವರು ಇಲ್ಲಿ ಅಧಿಕೃತವಾಗಿ, ಆತ್ಮೀಯವಾಗಿ ಚಿತ್ರಿಸಿದ್ದಾರೆ.

ತಮ್ಮ ಪ್ರತಿಭೆಯಿಂದ ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ ವಿನಾಯಕರ ಸಾಹಿತ್ಯದ ಆಳ ಅಗಲಗಳನ್ನು ಅತ್ಯಂತ ಸಾಂದ್ರವಾಗಿ ಸೆರೆ ಹಿಡಿಯುವ ಕಾರ್ಯವನ್ನು ಲೇಖಕರು ಸಮರ್ಥ್ಯವಾಗಿ ಮಾಡಿದ್ದಾರೆ. ಡಾ. ಜೀವಿ ಅವರು ವಿನಾಯಕರ ನಿಕಟವರ್ತಿಗಳು, ಅವರ ಜೀವನ ಸಾಧನೆಯನ್ನು ಹತ್ತಿರದಿಂದ ಬಲ್ಲವರು. ಈ ಹಿಂದೆ 'ನಾ ಕಂಡ ಗೋಕಾಕ ಜೀವನ ಮತ್ತು ಸಾಹಿತ್ಯ' ಎಂಬ ಬೃಹತ್ ಕೃತಿಯನ್ನು ರಚಿಸಿದವರು. ಹೀಗಿದ್ದೂ ಪ್ರಸ್ತುತ ಕೃತಿ ಅದರ ಪಡಿಯಚ್ಚಲ್ಲ. ವಿನಾಯಕರ ಸಾಹಿತ್ಯದ ಸೂಕ್ಷ್ಮದರ್ಶನವನ್ನು ಜೀವಿ ಅವರು ಜನಸಾಮಾನ್ಯರಿಗೂ ರುಚಿಸುವಂತೆ ರಚಿಸಿಕೊಟ್ಟಿದ್ದಾರೆ. ಒಂದು ಚಾರಿತ್ರಿಕ ಸತ್ಯದ ಪುನರ್ದರ್ಶನವಾಗಿ ಈ ಕೃತಿ ಹೊರಹೊಮ್ಮಿದೆ.

ಪ್ರಸ್ತುತ ಕೃತಿಯಲ್ಲಿ ನಾಲ್ಕು ಅಧ್ಯಾಯಗಳಿವೆ. ಬದುಕು, ಬರೆಹ, ದ್ಯಾವಾ ಪೃಥಿವೀ ಎಂಬುದಾಗಿ. ಹಾಗೆಯೇ ಅನುಬಂಧದಲ್ಲಿ ವಿನಾಯಕರ ಬದುಕಿನ ಮುಖ್ಯ ವರ್ಷಗಳು ಹಾಗೂ ಅವರು ರಚಿಸಿದ ಕೃತಿ ರಾಶಿಯ ವಿವರವಿದೆ. ಗೋಕಾಕರು ಬದುಕಿನಲ್ಲಿ ಪಟ್ಟ ಪಾಡುಗಳು ಅವು ಹಾಡಾಗಿ ರೂಪಾಂತರಗೊಂಡ ಬಗೆಯನ್ನು ಈ ಕೃತಿ ಎಳೆ ಎಳೆಯಾಗಿ ಬಿಚ್ಚಿಡುತ್ತಾ ಸಾಗಿದೆ. ವಿನಾಯಕರ ಇತಿವೃತ್ತ, ಗುಣ ಸ್ವಭಾವಗಳನ್ನು ಸಂಕ್ಷಿಪ್ತವಾಗಿ ಸ್ವಾರಸ್ಯಪೂರ್ಣವಾಗಿ ಇಲ್ಲಿ ಅಡಕಗೊಳಿಸಿರುವುದು ಈ ಕೃತಿಯ ಧನಾತ್ಮಕ ಅಂಶಗಳಲ್ಲಿ ಒಂದು. ವಿನಾಯಕರ ಬಗೆಗೆ ಈಗಾಗಲೇ ಹತ್ತಾರು ಕೃತಿಗಳು ಬೆಳಕು ಕಂಡಿವೆ. ಆದಾಗಲೂ ಜೀವಿ ಅವರ ಈ ಕೃತಿ ಎಲ್ಲಿಯೂ ಪುನರಾವರ್ತನೆಯಾದಂತೆ ತೋರುವುದಿಲ್ಲ. ಗೋಕಾಕರ ಸಾಧನೆಯ ಅನೇಕ ಅಂಶಗಳು ಈ ಕೃತಿಯ ಮೂಲಕ ಮೊದಲ ಬಾರಿಗೆ ಕನ್ನಡ ಓದುಗರಿಗೆ ದೊರಕಿದಂತಾಗಿದೆ. ವಿನಾಯಕರ ಎಲ್ಲ ಕೃತಿಗಳ ಸಾರಾಂಶ, ಅವುಗಳ ಮಹತ್ವವನ್ನು ಕಲೆ ಹಾಕಿರುವುದು ಈ ಕೃತಿಯ ಹೆಚ್ಚುಗಾರಿಕೆ.

ವಿನಾಯಕರೇ ಒಂದು ಕಡೆ 'ನಾನು ಪಯಣಿಗ, ಎಲ್ಲಿ ನೆಲ ನೀರ್ ಗಾಳಿ ಎನ್ನನು ಕರೆದವೋ' ಎಂದು ಉದ್ಗಾರ ತೆಗೆದದ್ದುಂಟು. ನೀರ ಮೇಲೆ, ನೆಲದ ಮೇಲೆ, ಗಾಳಿಯಲ್ಲಿ ಅವರು ಕೈಗೊಂಡ ಯಾತ್ರೆಗಳೆಲ್ಲ ಸಾಹಿತ್ಯ ಸೃಷ್ಟಿಯ ಮೂಲ ಸೆಲೆಗಳಾಗಿವೆ. ಕನ್ನಡ ಸಾಹಿತ್ಯವನ್ನು ಶ್ರೀಮಂತವಾಗಿಸುವ ಆಣತಿಯ ವೀಳ್ಯವನ್ನು ಎತ್ತಿಕೊಂಡು, ಕನ್ನಡ ನುಡಿಯ ನಂದಾದೀಪವನ್ನು ಅಖಂಡವಾಗಿ ಬೆಳಗಿಸುತ್ತಾ ಬಂದ ಕನ್ನಡ ನಾಡಿನ ಕೆಲವೇ ದಿಗ್ಗಂತಿಗಳಲ್ಲಿ ವಿನಾಯಕರೂ ಒಬ್ಬರು ಎಂಬುದನ್ನು ಅರ್ಥ ಮಾಡಿಕೊಳ್ಳಲು ಜೀವಿ ಅವರ 'ವಿ.ಕೃ. ಗೋಕಾಕ' ಕೃತಿಯನ್ನು ಎಲ್ಲರೂ ಓದಲೇ ಬೇಕು. ಇಷ್ಟು ಸೊಗಸಾಗಿ ಈ ಕೃತಿಯನ್ನು ಹೊರ ತಂದ ನವಕರ್ನಾಟಕ ಪ್ರಕಾಶನದ ಎಲ್ಲ ಮಿತ್ರರೂ ಅಭಿನಂದನೆಗೆ ಭಾಜನರಾಗುತ್ತಾರೆ.

●

ಕವಿತೆ

## ಆಗಮನ

ಅಂತೂ ಇಂತೂ
ಈ ವರ್ಷದ ಮಳೆ ಬಂತು
ಕೆಲವೆಡೆ ತುಂತುರು ಹನಿಯ
ಕಿರುಭೇಟಿ!
ಕೆಲವು ಕಡೆ ನೆರೆಯುಕ್ಕುವ
ಅರ್ಭಟದ ಥಾಟಿ!
ಜಿನು - ಜಿನುಗುತ್ತಾ ದಿನವಿಡೀ
ಮುಚುಗರ ಕೆಲವೆಡೆ!
ಬರೀ ಮೋಡದಷ್ಟೇ
ಅದೃಷ್ಟ ಇನ್ನೂ ಕೆಲವೆಡೆ!
ಬಿಸಿ ಆದ ಗ್ರೀಷ್ಮದಿಂದಾ
ತಂಪಿನ ವರ್ಷ ಋತುವಿಗೆ
ನಿಸರ್ಗದ ಪಯಣ!
ಸುಡುಸುಡುವ ಸೂರ್ಯನ
ಕಡು ಪ್ರತಾಪಕ್ಕೆ
ಹಿತವಾದ ಜಲಸೇಚನ!
ಗಿರಿ ವನಗಳಿಗೆ
ಹಸಿರು ಹೊದಿಕೆಯ
ನವೀಕರಣ!
ಹುರುಪಿನ ಚಿಗುರು
ಕೊನರಲು
ಜೀವ ಜಲದ ಪರಿಷೇಚನ
ಜೀವನ ಚಕ್ರದ
ಸಶೇಷ ತುದಿಗೆ
ಸಕ್ರಿಯ ಚೇತನದ ಜೋಡಣೆ!
ಜೀವ ಕೋಟಿಯ
ಜೀವನೋದ್ಧಾರಕ್ಕೆ
ನಿಸರ್ಗದ ಬಹುಮಾನ
ಮಳೆರಾಯನ ಆಗಮನ

-- ಸಿ. ರಮೇಶ ಬಾಬು ಮುಂಬಯಿ.

# ಹೊರನಾಡಿನಲ್ಲಿ ಕನ್ನಡದ ಗೆಲುವು

ಡಾ. ಜಿ.ಎನ್. ಉಪಾಧ್ಯ
ಕನ್ನಡ ವಿಭಾಗ
ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ.

ಮೊನ್ನೆ ಮೊನ್ನೆ ಬೆಂಗಳೂರಿನಲ್ಲಿ ನಡೆದ ಹೊರನಾಡ ಕನ್ನಡಿಗರ ಸಮಾವೇಶದ ಹಿನ್ನೆಲೆಯಲ್ಲಿ ಈ ಲೇಖನ ಸಿದ್ಧಗೊಂಡಿದೆ. ರಾಷ್ಟ್ರೀಯ ಮಟ್ಟದಲ್ಲಿ ಇಂದು ಕನ್ನಡದ ಸ್ಥಿತಿಗತಿಯ ವಿಚಾರ ವಿಮರ್ಶೆಯೂ ಇಲ್ಲಿದೆ.

ಇತ್ತೀಚೆಗೆ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಒಂದು ದಿನದ ವಿಶಿಷ್ಟ ಸಮಾವೇಶ ನಡೆಯಿತು. ಅದು ಹೊರನಾಡ ಕನ್ನಡಿಗರ ಸಮಾವೇಶ! ಭಾರತದೆಲ್ಲೆಡೆಯಿಂದ ಬಂದ ಸುಮಾರು ನೂರೈವತ್ತು ಮಂದಿ ಅಂದು ತಮ್ಮ ನೋವು ನಲಿವು ಬೇಕು ಬೇಡಿಕೆಗಳನ್ನು ಮುಂದಿಟ್ಟರು. ಇದನ್ನು ಆಯೋಜಿಸಿದ್ದು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಇದೇನು ಹೊರನಾಡ ಕನ್ನಡಿಗರ ಸಮಾವೇಶವಾಗಿರಲಿಲ್ಲ. ಹೊರನಾಡ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸೇರಿ ಕನ್ನಡವನ್ನು ಮುನ್ನಡೆಸುವ ಕುರಿತು ನಡೆಸಿದ ಚಿಂತನ ಮಂಥನ ಕಾರ್ಯಕ್ರಮ ಇದಾಗಿತ್ತು. ಬಹಳ ತಡವಾಗಿಯಾದರೂ ಇಂಥ ಒಂದು ಸಭೆಯನ್ನು ಕರೆದದ್ದಕ್ಕೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವನ್ನು ಎಲ್ಲರೂ ಅಭಿನಂದಿಸಲೇಬೇಕು.

ವಾಸ್ತವವಾಗಿ ರಾಷ್ಟ್ರದ ಯಾವ ಕಡೆಯೂ ಜನರು ತಮ್ಮ ಭಾಷೆ, ಅದರ ಅಭಿವೃದ್ಧಿಯ ಬಗೆಗೆ ಕನ್ನಡಿಗರಷ್ಟು ಉದಾಸೀನರಾಗಿಲ್ಲ ಎಂಬುದು ಎಲ್ಲರೂ ಗೊತ್ತಿರುವ ಸಂಗತಿ. ಕನ್ನಡಕ್ಕೆ ರಾಷ್ಟ್ರ ಮಟ್ಟದಲ್ಲಿ ಯಾವುದೇ ಸ್ಥಾನಮಾನವಿಲ್ಲ. ತಮ್ಮ ನಾಡು, ನುಡಿ, ಗಡಿ, ನೀರೆಂದು ಹೋರಾಟಕ್ಕಿಳಿದು ಅಸ್ಮಿತೆಯನ್ನು ಉಳಿಸಿ ಮೆರೆದವರು ಕನ್ನಡಿಗರಲ್ಲ. ತಮ್ಮ ನೆರೆ ಹೊರೆಯ ಅನ್ಯ ಭಾಷಿಕರೊಂದಿಗೆ ಸಹ ಬಾಳ್ವೆಯಿಂದ ಬದುಕುತ್ತಿರುವ ಕನ್ನಡಿಗರು ಪಾಪದವರು, ಉದಾರಿಗಳು. ಹೀಗಾಗಿ ಕನ್ನಡಿಗರು ಗಳಿಸಿಕೊಂಡದ್ದಕ್ಕಿಂತ ಕಳಕೊಂಡದ್ದೇ ಜಾಸ್ತಿ. ಇದನ್ನು ಗಮನಿಸಿಯೇ ಪ್ರೊ. ಜವರೇಗೌಡರು ತಮ್ಮ ವಿದೇಶಗಳಲ್ಲಿ ನಾಲ್ಕು ವಾರ ಕೃತಿಯಲ್ಲಿ ಹೀಗೆ ತೀರ್ಮಾನಕ್ಕೆ ಬರುತ್ತಾರೆ.

'ಭಾರತಕ್ಕೆ ಬರುವ ವಿದೇಶಿಯರು ದೆಹಲಿ ಬೊಂಬಾಯಿಗಳನ್ನು ನೋಡಿಕೊಂಡು ಮದ್ರಾಸಿಗೆ ಬರುತ್ತಾರೆ. ಮದ್ರಾಸಿನ ಭಾಷೆಯ ಬಗ್ಗೆ ಅವರಿಗೆ ವಿವರ ತಿಳಿಯುತ್ತದೆ. ಬೇರೆ ಭಾಷೆಗಳ ಕಡೆಗೆ ಅವರ ಗಮನ ಹರಿಯುವುದಿಲ್ಲ. ಹರಿಯುವಂತೆ ಮಾಡುವ ಕನ್ನಡಿಗರೂ ವಿದೇಶದಲ್ಲಿಲ್ಲ. ವಿದೇಶಗಳಲ್ಲಿರುವ ಕನ್ನಡಿಗರು ಮನಸ್ಸು ಮಾಡಿದ್ದರೆ ಅವರು ಕನ್ನಡದ ರಾಯಭಾರಿಗಳಾಗಿದ್ದರೆ ಈ ಕೆಲಸ ಸುಲಭವಾಗುತ್ತಿತ್ತು.' ಈ ಮಾತನ್ನು ನಾವು ಹೊರ ನಾಡಿನಲ್ಲಿರುವ ಕನ್ನಡಿಗರಿಗೂ ಅನ್ವಯಿಸಬಹುದು. ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡಕ್ಕೆ ಸಹಜವಾಗಿಯೇ ದೊರಕಬೇಕಾದ ಸ್ಥಾನಮಾನಗಳಿಗಾಗಿ ನಾವು ಅಷ್ಟಾಗಿ ಶ್ರಮಿಸಿಲ್ಲ ಎಂಬುದು ಸತ್ಯ. ಕವಿ ಕುವೆಂಪುರವರು ಬಹಳ ಹಿಂದೆಯೇ 'ಪ್ರಚಾರ ಮತ್ತು ಪ್ರಕಟಣೆಯ ಅಭಾವದಿಂದ ಕನ್ನಡಕ್ಕೆ ಆಗಿರುವಷ್ಟು ಮತ್ತು ಆಗುತ್ತಿರುವಷ್ಟು 'ಅನ್ಯಾಯ' ಮತ್ಯಾವ ಭಾರತೀಯ ಭಾಷೆಗೂ ಆಗುತ್ತಿಲ್ಲವೆಂದು ತೋರುತ್ತದೆ' ಎಂದಿದ್ದರು. ಆ ಮಾತು ಇಂದಿಗೂ ನಿಜವೇ ಆಗಿದೆ. ಕನ್ನಡವನ್ನು ರಾಷ್ಟ್ರ ಮಟ್ಟದಲ್ಲಿ ಜನಪ್ರಿಯಗೊಳಿಸಲು ಜನರೊಂದಿಗೆ ಕರ್ನಾಟಕ ಸರಕಾರವೂ ತನ್ನ ಕೈಲಾದುದನ್ನು ಮಾಡಬೇಕು. ಆ ನಿಟ್ಟಿನಲ್ಲಿ ಮೊನ್ನಿನ ಸಮಾವೇಶ ಒಂದು ಒಳ್ಳೆಯ ಆರಂಭ.

ಬಂಗಾಳಿ, ತಮಿಳು, ಮರಾಠಿ, ತೆಲುಗು ಮೊದಲಾದ ಭಾರತೀಯ ಭಾಷೆಗಳು ನಮ್ಮ ದೇಶದ ಬೇರೆ ಬೇರೆ ಕಡೆಗಳಲ್ಲಿ ಪಡೆದುಕೊಂಡಿರುವ ಸ್ಥಾನಾವಕಾಶವನ್ನು ನೋಡಿದಾಗ ಕನ್ನಡದ ಬಡತನ ಎದ್ದು ಕಾಣುತ್ತದೆ. ಈ ಅಂಶ ಕರ್ನಾಟಕ ಸರಕಾರಕ್ಕೆ; ಸಂಸ್ಕೃತಿ ಇಲಾಖೆಗೆ ಗೊತ್ತಾಗದ ವಿಷಯವೇನಲ್ಲ. ಅನ್ಯ ಭಾಷೆಗಳ ಪ್ರಚಾರ ಪ್ರಸಾರಕ್ಕೆ ಆಯಾ ಸರಕಾರಗಳು ತೋರುತಿರುವ ಆಸ್ಥೆ ಗಮನಾರ್ಹವಾಗಿದೆ. ಈ ಎಲ್ಲ ಹಿನ್ನೆಲೆಯಲ್ಲೂ 'ಇಂಥ' ಒಂದ ಸಮಾವೇಶ ಜರೂರಿನ ಸಂಗತಿಯಾಗಿತ್ತು. ಕೊನೆಗೂ ಅದು ಸಾಕಾರಗೊಂಡದ್ದು ಸಮಾಧಾನದ ಸಂಗತಿ.

ಈ ವರೆಗೆ ಹೊರನಾಡ ಕನ್ನಡ ಸಂಘ ಸಂಸ್ಥೆಗಳೊಂದಿಗೆ ಸಂಸ್ಕೃತಿ ಇಲಾಖೆ ಇಟ್ಟುಕೊಂಡಿದ್ದ ಸಂಬಂಧದ ಸ್ವರೂಪವೂ ಮೊನ್ನೆ ಬಯಲಾಯಿತು. ಎಷ್ಟೋ ಪ್ರಮುಖ ಸಂಸ್ಥೆಗಳಿಗೆ ಈ ಸಮಾವೇಶದ ಕರೆ ಬರಲಿಲ್ಲ! ಕರೆಯದೆ ಬಂದವರೂ ಇದ್ದರು. ಇರಲಿ ಅವರೂ ಹೊರನಾಡಿನಲ್ಲಿ ಕನ್ನಡವನ್ನು ಮುನ್ನಡೆಸುತ್ತಿರುವವರಲ್ಲವೇ. ಒಂದು ದಿನದ ಸಮಾವೇಶದಿಂದ ಕನ್ನಡದ ಸ್ಥಿತಿಗತಿ ತಟಕ್ಕನೆ ಬದಲಾಗುವುದಿಲ್ಲ. ಆದಾಗ್ಯೂ ನಾಡಿನ ಹೊರಗೆ ಏನಾಗುತ್ತಿದೆ ಎಂಬ ಅರಿವು ಸರಕಾರಕ್ಕಿರಬೇಕು. ಆದ್ದರಿಂದಲೇ ಮೊನ್ನಿನ ಸಭೆಯನ್ನು ಕರೆಯಲು ಸಂಸ್ಕೃತಿ ಇಲಾಖೆಯ ಮುಂದಿದ್ದ ಮುಖ್ಯ ಆಶಯವೂ ಸ್ಪಷ್ಟವಾಯಿತು. ಹೊರನಾಡು ಕನ್ನಡ ಸಂಘ ಸಂಸ್ಥೆಗಳ ಕನ್ನಡ ನಾಡು, ನುಡಿ, ಸಂಸ್ಕೃತಿ ಕಲೆಗಳಿಗೆ ಸಂಬಂಧಪಟ್ಟಂತೆ ಯಾವ ಯಾವ ಕಾರ್ಯಕ್ರಮಗಳನ್ನು ನಡೆಸುತ್ತಿವೆ? ಅಂಥ ಸಂಸ್ಥೆಗಳು ಹೊಂದಿರುವ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಧ್ಯೇಯೋದ್ದೇಶಗಳೇನು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯಹಾಗೂ ಈ ಸಂಸ್ಥೆಗಳ ನಡುವೆ ಯಾವ ಬಗೆಯ ಸಂಪರ್ಕ ಹಾಗೂ ಸಂಬಂಧವನ್ನು ಇರಿಸಿಕೊಳ್ಳಬಹುದು ಎಂಬೆಲ್ಲ ವಿಚಾರಗಳ ಆದಾನ ಪ್ರದಾನ ಮಾಡಿಕೊಳ್ಳುವುದಾಗಿತ್ತು. ರಾಷ್ಟ್ರದ ವಿವಿಧ ಪ್ರದೇಶಗಳಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ನೆಲೆಸಿರುವ ಕನ್ನಡಿಗರನ್ನು ಒಗ್ಗೂಡಿಸಿ ಅವರ ಸಮಸ್ಯೆಗಳನ್ನು ಅರಿತುಕೊಳ್ಳುವ ವಿನೂತನ ಪ್ರಯತ್ನ ಇದಾಗಿತ್ತು. ಇಂಥ ದೂರಾಲೋಚನೆಯ ಯೋಜನೆಯನ್ನು ರೂಪಿಸಿ ಮೊದಲ ಹೆಜ್ಜೆಗಳನ್ನಿರಿಸಿದ ಸಂಸ್ಕೃತಿ ಇಲಾಖೆ ಅಭಿನಂದನೆಗೆ ಪಾತ್ರವಾಗಿದೆ. ಅಷ್ಟೇ ಅಲ್ಲ; ಇದಕ್ಕೆ ಸಂಬಂಧಿಸಿದವರೆಲ್ಲರೂ ಕನ್ನಡಿಗರ ಕೃತಜ್ಞತೆಗೆ ಪಾತ್ರರು ಎಂಬುದನ್ನು ಎತ್ತಿ ಹೇಳಬೇಕಾಗಿಲ್ಲ. ನಾಡಿನ ಸಂಸ್ಕೃತಿಯನ್ನು ಬಿಂಬಿಸಬೇಕಾಗಿರುವ ಬೆಳೆಸಿ ಬಲಗೊಳಿಸುವ ಜವಾಬ್ದಾರಿಯನ್ನು ಹೊತ್ತಿರುವ ಕನ್ನಡ ಸಂಸ್ಕೃತಿ ನಿರ್ದೇಶನಾಲಯ ಕೇವಲ ಸರಕಾರಿ

(ಪುಟ 12ಕ್ಕೆ)

ಕನ್ನಡಕ್ಕೆ ಈ ಹೊತ್ತಿನಲ್ಲಿ ಮುಖ್ಯವಾಗಿ ಆಗಬೇಕಾದದ್ದು ಅದರ ಅಸ್ತಿತ್ವವನ್ನು ಉಳಿಸುವ ಕೆಲಸ. ತನ್ನ ಮನೆಯಲ್ಲಿಯೇ ಅದಕ್ಕೆ ಭದ್ರವಾದ ಸ್ಥಾನವಿಲ್ಲದಿರುವಾಗ ಕನ್ನಡ, ವಿಶ್ವ ಕನ್ನಡವಾಗುವುದು ನಗೆ ಮಾತು. ಕನ್ನಡಕ್ಕೆ ವಿಶ್ವ ಚೈತನ್ಯವನ್ನೊದಗಿಸುವ ಕೆಲಸ ಆಗಬೇಕು. ಅದು ವೈಯಕ್ತಿಕ ನೆಲೆಯಲ್ಲಾದರೂ ಸರಿಯೆ, ಎಷ್ಟೇ ಸಣ್ಣ ಪ್ರಮಾಣದಲ್ಲಾದರೂ ಸರಿಯೆ, ನಡೆಯುತ್ತಲೇ ಇರಬೇಕಾದ ಕೆಲಸ. ಅದಕ್ಕೆ ಕೊನೆ ಎಂಬುದಿಲ್ಲ.

-- ಡಾ. ಹಾ.ಮಾ. ನಾಯಕ
ಸಂಪ್ರತಿ ಪುಟ 104

ಲಲಿತ ಪ್ರಬಂಧ

# ಈಚಲು ಮರದ ಕೆಳಗೆ

✍ ಪು.ತಿ. ನರಸಿಂಹಾಚಾರ್

ನನಗೆ ತೆಂಗಿನ ಮರವನ್ನು ಕಂಡರೆ ಮನಸ್ಸಿಗೆ ಹೇಗೆ ಹೇಗೆಯೋ ಆಗುತ್ತದೆ. ನಮ್ಮ ತೋಟ ಜ್ಞಾಪಕಕ್ಕೆ ಬರುತ್ತದೆ. ರೈತ ಜ್ಞಾಪಕಕ್ಕೆ ಬರುತ್ತಾನೆ. ಮನಸ್ಸಿಗೆ ಸಂಕಟ ತರುವ ನೆನಪಿವು. ಆ ತೋಟದ ಕಾಯನ್ನು ನಾನು ತಿನ್ನುವಂತಿಲ್ಲ. ಆ ಎಳನೀರನ್ನೂ ಕುಡಿಯುವಂತಿಲ್ಲ. ಕೊಬ್ಬರಿಯ ಸುದ್ದಿಯೇ ಕಾಣೆ. ಅಲ್ಲಿ ಅವನು ಅನುಭವಿಸಬೇಕು, ಇಲ್ಲಿ ನಾನು ಈ ಪದಾರ್ಥಗಳನ್ನು ಒಂದಕ್ಕೆ ಹತ್ತರಷ್ಟು ಕೊಟ್ಟು ಕೊಂಡುಕೊಳ್ಳಬೇಕು. ಈ ಕಾಯಿಗಳೆಲ್ಲಾ ನನ್ನ ದಕ್ಷತೆಯನ್ನು ನೋಡಿ ನಗುವಂತೆ ಕಾಣುತ್ತವೆ. ಆದ್ದರಿಂದ ಇವುಗಳ ಮತ್ತು ಈ ಮರಗಳ ದರ್ಶನ ನನಗೆ ಅಪ್ರಿಯ.

ಆದರೆ ಅದರ ಗೆಳೆಯನಾದ ಈಚಲು ಮರವನ್ನು ಕಂಡರೆ ನನಗೆ ಏನೋ ಒಂದು ಅಭಿಮಾನ. ಇದರ ಧೈರ್ಯವೇ ಧೈರ್ಯ, ದಾಕ್ಷೀಕವೇ ದಾಕ್ಷೀಕ. ಇದು ಇಲ್ಲದ ಜಾಗವಿಲ್ಲ. ಮೈದಾನದಲ್ಲಿ ಎಲ್ಲಿ ಸ್ವಲ್ಪ ನೀರಿನ ಆಸರೆ ಇದ್ದರೆ ಅಲ್ಲಿ ಇದು ಹಾಜರು. ತಾನೇ ಕಾಡಾಗಿ ಬೆಳೆದರೂ ಸರಿಯೆ, ಒಂಟಿಯಾಗಿದ್ದರೂ ಸರಿಯೆ, ಇದು ನಿರ್ಭಯವಾಗಿ ಯಾರ ಹಂಗೂ ನನಗೆ ಬೇಡ, ನನ್ನನ್ನು ತಡೆಯುವವನಾವನು ಎಂದುಕೊಂಡು ಗುಂಗುರುತಲೆಯ ಗರಿಯನ್ನಲ್ಲಾಡಿಸುತ್ತಾ ನಿಂತಿರುತ್ತದೆ. ತರುಗಳಲ್ಲಿ ಇದು ಮ್ಲೇಚ್ಛ, ಕಲ್ಪ ದ್ರುಮಗಳಲ್ಲಿ ಕೌಶಿಕ ಕಲ್ಪ ದ್ರುಮ. ಹೊಲದ ಮಧ್ಯದಲ್ಲೋ ಗಿಡದ ಮಧ್ಯದಲ್ಲೋ ತೊರೆಯ ತಡಿಯಲ್ಲೋ ಗುಡಿಯ ತೋಟದಲ್ಲೋ ಹಾಳು ಮಂಟಪದ ಬದಿಯಲ್ಲೋ ಅಂತೂ ಎಲ್ಲಾದರೂ ಸರಿಯೆ ಇದು ನಿಲ್ಲುವ ನಿಲುವೇ ನಿಲುವು! ಜನಕ್ಕೇನೂ ಇದನ್ನು ಕಂಡರೆ ಅಸಹ್ಯ, ಇದರ ಸೋಂಕು ಮೈಲಿಗೆ. ಆದರೆ ಅವರ ಮೂಗು ಮುರಿತಕ್ಕೆ ಸರಿಯಾದ ಬಿಂಕ ಇದಕ್ಕೂ ಉಂಟು. ಕಾಸಿದ ಬಂಗಾರದಂಥ ಬಣ್ಣದ ಹೊಂಬಾಳೆಯನ್ನು ಮೆರೆಸುತ್ತಾ ತನ್ನ ನೀಳವಾದ ಅಲಂಗಿನಂತಿರುವ ಗರಿಗಳನ್ನು ಗಾಳಿಯಲ್ಲಿ ಅಲುಗಿಸುತ್ತಾ ಸಿತಾರು ಬಾರಿಸುವವನಂತೆ ನಿಂತಿರುವ ಈ ಮ್ಲೇಚ್ಛ ತರುವಿಲಾಸಿ ನನಗೆ ಯಾವಾಗಲೂ ಹೃದ್ಯನೇ.

ಇದರಿಂದ ನನಗೂ ಇದಕ್ಕೂ ಸರಸ ಸಂಬಂಧವುಂಟೆಂದು ಯಾರೂ ಭಾವಿಸಬಾರದು. ಇದು ವ್ಯಸನಕ್ಕೆ ಕಾರಣವಾಗಬಹುದೆಂದು ನಾನು ಜಾಗರೂಕನಾಗಿಯೇ ಇದ್ದೇನೆ. ಆದರೆ ಒಂದು ದಿನ ಅದರ ತಲದಲ್ಲಿ ನಾನು ಕುಳಿತು ಕೊಳ್ಳಬೇಕಾಯಿತು. ಸಂದರ್ಭ ಹೀಗೆ: ನಮ್ಮೂರ ತೊರೆ ಎಂದರೆ ನನಗೆ ಪ್ರೀತಿ. ಒಂದು ಬೇಸಗೆಯ ಮಧ್ಯಾಹ್ನ ನಾನು ಅದರ ಕಣಿವೆಯಲ್ಲಿ ಓಡಾಡುತ್ತಿದ್ದೆ. ಗೆಳೆಯರು ಬುತ್ತಿ ತೆಗೆದುಕೊಂಡು ಹಿಂದಿನಿಂದ ಬರುತ್ತೇವೆ ಎಂದಿದ್ದರು. ನಾನು ಒಬ್ಬನೇ ಮುಂದಾಗಿ ಹೊರಟು ಕಾಡು ಮೇಡೆಲ್ಲಾ ಸುತ್ತಿ ದಣಿದು ತೊರೆಯ ಸನಿಯಕ್ಕೆ ಬಂದೆ. ಕುಳಿತುಕೊಳ್ಳೋಣ ಎಂದರೆ ಎಲ್ಲೂ ನೆರಳಿಲ್ಲ. ಆದರೆ ಆ ಕಣಿವೆಯ ನಟ್ಟ ನಡುವೆ ತೊರೆ ಹರಿಯುವ ಜಾಗದಲ್ಲೇ ಒಂದು ದೊಡ್ಡ ಈಚಲು ಮರ ನಿಂತಿದೆ. ಅದರ ಕೆಳಗೆ ಒಂದು ಪ್ರಶಸ್ತವಾದ ಬಂಡೆ. ಆ ಬಂಡೆಯನ್ನು ತೊರೆ ತೊಳೆಯುತ್ತಾ ಹರಿಯುತ್ತಿದೆ. ಒಂದು ಮಾರು ದೂರದಲ್ಲಿ ಈ ಜಡೆಯಷ್ಟಗಲದ ನೀರ ಹರಿವು ಒಂದು ಆಳುದ್ದದ ನಾಲಗೆಯ ಕಲ್ಲಿನಿಂದ ಕೆಳಕ್ಕೆ ಧುಮುಕುತ್ತದೆ. ಇದಕ್ಕಿಂತ ಒಳ್ಳೆಯದಾದ ಜಾಗವನ್ನು ಎಲ್ಲಿ ತರೋಣ? ನಾನು ನಿರ್ವಾಹವಿಲ್ಲದೆ ಆ ಬಂಡೆಯ ಮೇಲೆ ಕುಳಿತೆ. ಮೇಲೆ ಈಚಲು ಮರ. ಕಾಶಕುಸುಮದ ಚಾಮರದಂತೆ ಇದರ ಗರಿಯ ನೆರಳು ಮೃದುವಾಗಿ ನನ್ನ ತಲೆಯ ಮೇಲೆ ಬೀಸುತ್ತಿತ್ತು. ನನಗೇನೂ ಹಾಯಾಯಿತು. ಆದರೆ ಈ ಸ್ವಾದುವಾದ ನೆರಳನ್ನು ಚೆಲ್ಲುತ್ತಿದ್ದ ಮರ ಈಚಲು ಮರ! ಒಂಟಿಯಾಗಿದ್ದರೂ ಅದು ದಿಟ್ಟವಾಗಿತ್ತು, ಅದರ ಗರಿಗಳು ಚಟುವಟಿಕೆಯನ್ನು ತೋರುತ್ತಿದ್ದುವು. ಆ ಗರಿಗಳು ಸ್ತಬ್ಧವಾಗಿದ್ದಾಗ ಸಿಪಾಯಿಗಳ ಅಟೆನ್‌ಷನ್ ರೀತಿ, ಅಲುಗಾಡುವಾಗ ಕವಾಯತ್ತಿನ ರೀತಿ ತೋರುತ್ತಿದ್ದುವು. ಅದು ಹಣ್ಣು ಹಿಡಿದ ಮರ. ಮರಕ್ಕೆ ಆ ಸಮಯದಲ್ಲೂ ಧ್ಯಾನಮೌನಗಳಿದ್ದಂತೆ ಕಾಣಲಿಲ್ಲ. ಸೂರ್ಯ ಸುಟ್ಟರೆ ಸುಡಲಿ, ಹಳ್ಳ ಒಣಗಿದರೆ ಒಣಗಲಿ, ತಾನೇನೋ ತಂಪಾಗಿದ್ದೇನೆ ಸಾಕು ಎನ್ನುವಂತಿತ್ತು. ಅದು. ಅದನ್ನು ತುಸು ಕಾಲ ನಿಟ್ಟಿಸಿ ಭಲಾಪ್ಪ ಎಂದೆ.

ತಲೆಯ ಮೇಲೆ ನೆರಳು, ಕಾಲಿನ ಮೇಲೆ ಶೀತಲವಾರಿ, ಸುತ್ತ ನಿದಾಘ ರವಿ ಕಿರಣ ಸಮುದ್ರ. ನನಗೆ ಸ್ವಲ್ಪ ಜೊಂಪು ಹಿಡಿಯಿತೇನೋ ಅಥವಾ ಈಚಲು ಮರದ ಮಹಿಮೆಯೋ; ಅದೇ ಇರಬೇಕು. ಮನಸ್ಸು ಹಚೆ ಹಚೆಯಾಗಿ ಎದ್ದು ನನ್ನ ತಲೆಯ ಮೇಲೆ ತೇಲುತ್ತಿರುವಂತೆ ನನಗೆ ತೋರಿತು. ನನ್ನ ದೇಹ ಸ್ಥಿರ, ಮನಸ್ಸು ಅಸ್ಥಿರ; ನಾನು ಹೊಗೆಯಾಡುತ್ತಿದ್ದ ಕಾರ್ಖಾನೆಯ ಚಿಮಣಿಯಂತೆ ವನ ದೇವತೆಗಳಿಗೆ ಕಂಡಿರಬೇಕು. ಅಂತು ಪ್ರತ್ಯಕ್ಷದ ಕಠೋರ ಋತಕ್ಕೆ ನಾನು ಆಗ ಬದ್ಧನಾಗಿರಲಿಲ್ಲ. ಬಂಡೆಗಳ ದೊಡ್ಡ ದೊಡ್ಡ ಹಕ್ಕಿಗಳಂತೆ ತೋರಿದುವು. ಅವುಗಳ ಪಕ್ಕದಲ್ಲಿದ್ದ ಸಣ್ಣ ಸಣ್ಣ ಬಂಡೆಗಳು ಅವುಗಲ ಮೊಟ್ಟೆಯಂತೆಯೂ, ಇವು ಅವುಗಳ ಮೇಲೆ ಕಾವು ಕೂತಿರುವಂತೆಯೂ ಕಂಡವು. ಸಿಂದಬಾದ್ ನಾವಿಕನ ಕತೆಯಲ್ಲಿ ಬರುವ ರಣಹದ್ದುಗಳ ಕಣಿವೆಯೆ ಇದು? ನಾನು ಇದರಿಂದ ಪಾರಾಗುವ ಬಗೆ ಹೇಗೆ? ಈ ತರದ ಒಂದು ದಿಗಿಲು ನನಗೆ ಬಡಿಯಿತು. ಆಗ ಈಚಲು ಮರದ ಗರಿಯು ಮರ್ಮರಿಸುತ್ತಿತ್ತು. ನಾನು ಅದನ್ನು ಗಮನವಿಟ್ಟು ಆಲಿಸಹತ್ತಿದೆ.

ಮಧುರವಲ್ಲದಿದ್ದರೂ ಸ್ಪಷ್ಟವಾದ ಮರ್ಮರದ ಮೂಲಕ ಅದು ಹೇಳುತ್ತಿದ್ದುದು ಮಹರ್ಷಿ ವ್ಯಾಸರ ಮಾತು: 'ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ' ಎಂದು. ಈಚಲು ಮರಕ್ಕೆ ನಮ್ಮ ಪುರಾತನ ಪರಮ ಪವಿತ್ರ ಸಂಸ್ಕೃತಿಯ ಸುಭಾಷಿತ ಹೇಗೆ ತಿಳಿಯಿತು? ಪುರಾಣ ಪ್ರವಚನ ನಡೆಯುವ ಸ್ಥಳಗಳಲ್ಲಿ ಇದಕ್ಕೆ ಇರುವುದಕ್ಕೆ ಅವಕಾಶವಿಲ್ಲ. ಅಥವಾ ಇದು ಇರುವೆಡೆಯಲ್ಲಿ ಪುರಾಣ ಶ್ರವಣ ನಡೆಯುವುದಿಲ್ಲ. ನಾರಿಕೇಳಕ್ಕೆ ಈ ಆರ್ಯ ಸಂಸ್ಕೃತಿಯ ಗಂಧ ಸಹಜವಾಗಿಯೇ ಉಂಟು. ಅದರ ಸಂತಾನವಿಲ್ಲದ ಪೂಜೆ ಎಲ್ಲಿ, ಪುರಸ್ಕಾರವೆಲ್ಲಿ, ವೈದಿಕ ಕರ್ಮವೆಲ್ಲಿ, ಫಲದಾನವೆಲ್ಲಿ? ಸಂಸ್ಕೃತ ಅದರ ರಸಗತವಾಗಿದ್ದರೆ ಅದರಲ್ಲೇನೂ ಆಶ್ಚರ್ಯವಿಲ್ಲ. ನನ್ನ ತೀರ್ಥರೂಪರು ಶಿಷ್ಯರಿಗೆ ಧರ್ಮಶಾಸ್ತ್ರ ಪ್ರವಚನವನ್ನು ಮಾಡುತ್ತಿದ್ದಾಗ, ಎಷ್ಟೋ ರಹಸ್ಯಗಳನ್ನು ಅಟ್ಟದ ಮೇಲಿದ್ದ ತೆಂಗಿನ ಹಣ್ಣುಗಳು ಶಿಷ್ಯರಿಗಿಂತ ಹೆಚ್ಚಾಗಿಯೇ ಗ್ರಹಿಸಿದ್ದುವೆಂದು ನನ್ನ ನಂಬಿಕೆ. ತೆಂಗಿನ ಮರ್ಮರದಲ್ಲಿ ವೇದಘೋಷದ ಹೊಳಲಿದೆ, ಸಂಸ್ಕೃತದ ಶೈಲಿಯಿದೆ. ಈಚಲು ಮರಕ್ಕೆ ಈ ದೇವ ಭಾಷೆಯ ಪರಿಚಯ ಹೇಗಾಯಿತು? ವಿಶ್ವಾಮಿತ್ರನಿಂದ ಕಲಿಯಿತೆ? ಇದು ರಾವಣನಂಥ ಬ್ರಾಹ್ಮಣ ಮರವೇ ಆಗಿರಬಹುದೇ? ಇದು ಎಂಥ ಪಂಡಿತವಕ್ಕಿಗೆ ಆಶ್ರಯ ಕೊಟ್ಟಿರಬಹುದು? ಇಂಥ ಮಡಿಜಾಗದಲ್ಲಿ ಇದು ಬೀಡು ಮಾಡಿ ಕೊಂಡು ದೇವ

ಭಾಷೆಯಾಡುತ್ತಿದೆಯಲ್ಲಾ? ಇದನ್ನು ಎಂತು ಸಹಿಸುವುದು? ಇದನ್ನು ಏಕೆ ಕಡಿದು ಹಾಕದೆ ಉಳಿಸಿಕೊಂಡಿದ್ದಾರೆ? ಇತ್ಯಾದಿ ದುರ್ಭಾವನೆಗಳು ನನ್ನಲ್ಲಿ ಉತ್ಪನ್ನವಾದವು. ಆದರೆ ತರು ಮರ್ಮರಿಸುವುದನ್ನು ನಿಲ್ಲಿಸಲಿಲ್ಲ. ಶ್ರೀ ಗೊರೂರು ಅವರ ಎಮ್ಮೆಗೆ ಮಾತು ಮಾತ್ರ ತಿಳಿಯುತ್ತಿತ್ತು. ಆ ಕೌಶಿಕ ಕಾಮಧೇನುವಿಗಿಂತ ಈ ಕೌಶಿಕ ಕಲ್ಪದ್ರುಮ ಹೆಚ್ಚು ಕುಶಲ. ಇದು ಮನಸ್ಸನ್ನೂ ಅರಿಯಬಲ್ಲುದು.

''ನಿನ್ನನ್ನು ಅರಸಿಕೊಂಡು ನಾನು ಬರಲಿಲ್ಲ. ನನ್ನನ್ನು ಅರಸಿಕೊಂಡು ನೀನು ಬಂದಿದೀಯೆ. ಆದರೆ ನನಗೆ ಕೇಡುಕನ್ನು ಯೋಚಿಸುತ್ತಿದ್ದೀಯೆ. ನನಗೆ ಯಾರ ಆಶ್ರಯವೂ ಬೇಕಿಲ್ಲ. ನನಗೆ ಯಾರ ಹಂಗೂ ಇಲ್ಲ. ಯಾರ ಬೆದರಿಕೆಗೂ ನಾನು ಸಗ್ಗುವಂತಿಲ್ಲ. ನನಗೆ ಇಷ್ಟ ಬಂದ ಕಡೆ ನಾನು ಬೆಳೆಯುತ್ತೇನೆ. ನನಗೆ ಸರಕಾರದ ಬೆಂಬಲವಿದೆ ಎಂದು ನೀನು ತಿಳಿದುಕೊಂಡಿರಬಹುದು. ಯಾವ ಫಾರೆಸ್ಟು ಡಿಪಾರ್ಟ್‌ಮೆಂಟ್ ಎಷ್ಟು ಖರ್ಚು ಮಾಡಿ ನನ್ನನ್ನು ಹುಟ್ಟು ಹಾಕಿ ಬೆಳೆಸಿದೆ? ಬೆರಳು ಮಡಿಸು. ಅಷ್ಟಕ್ಕೂ ಸರಕಾರಕ್ಕೇ ಅಲ್ಲವೇ ನನ್ನ ಬೆಂಬಲ? ನನ್ನ ರಸದಿಂದ ತಾನೆ ನಿಮಗೆ ಜ್ಞಾನ, ಮಿಕ್ಕವರಿಗೆ ಅಜ್ಞಾನ? ನಿಮ್ಮ ಜ್ಞಾನವೇ ಲೇಸೋ, ಅವರ ಅಜ್ಞಾನವೇ ಲೇಸೋ ಯಾರು ಹೇಳಬಲ್ಲರು? ಎರಡೂ ಒಂದೇ ನಾಣ್ಯದ ಎರಡು ಮುಖಗಳು. ತಲೆ ನೀವು, ತಳ ಅವರು. ನಿಮ್ಮಿಬ್ಬರ ಬುದ್ಧಿಯ ಟಂಕಸಾಲೆಗ ನಾನು. ನನ್ನ ವಿಷಯದಲ್ಲಿ ನೀನು ಗೌರವದಿಂದಿರಬೇಕು. ಆದರೆ ಮನುಷ್ಯ ಸ್ವಭಾವವೇ ಹೀಗೆ. ಹಾ... ''ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ'' ಎಂದು ನಿಡುಸುಯ್ಯುತ್ತಾ ಮೌನವಾಯಿತು ಈ ಕೌಶಿಕ ಕಲ್ಪದ್ರುಮ.

ಬಿಸಿಲು ದಗೆ ಹೆಚ್ಚಿತ್ತು. ಅದನ್ನು ಸ್ಪರ್ಧಿಸುವಂತೆ ಹೊಟ್ಟೆಯಲ್ಲಿ ಹಸಿವು. ಈ ಸ್ಥಿತಿಯಲ್ಲಿ ಬುದ್ಧಿ ಮಾಂದ್ಯ ಸಹಜ.

ನಾತ್ಯಶ್ನತಸ್ತು ಯೋಗೋಸ್ತಿ
ನಚೈ ಕಾನ್ತ ಮನಶ್ನತಃ

ಬುದ್ಧದೇವನಿಗೆ ಪ್ರಜ್ಞೆ ಬಂದದ್ದು ಸುಜಾತೆಯು ತಂದಿದ್ದ ಹಾಲನ್ನು ಕುಡಿದ ಮೇಲೆ ತಾನೆ. ನನಗೆ ಬರುವ ಬುತ್ತಿ ಇನ್ನೂ ಬಂದಿಲ್ಲ. ಗೆಳೆಯರು ಮರೆತರೋ ಇಲ್ಲ ದಾರಿ ತಪ್ಪಿದರೋ ಕಾಣೆ. ಈ ಮರ ಜಾಣ ಮರ. ಇದರೊಡನೆ ಸಂಭಾಷಣೆ ನಡೆಸುವಷ್ಟು ಚೈತನ್ಯ ನನ್ನಲ್ಲಿ ಇಲ್ಲ. ಸೌಜನ್ಯಕ್ಕೋಸ್ಕರ ಅದು ಆಡುವುದನ್ನೆ ನಾನು ಲಾಲಿಸಬೇಕಾಯಿತು.

'ನಿನ್ನ ಬುದ್ಧಿ ಈಗ ನೆಟ್ಟಗಿಲ್ಲ, ದಿಟ. ನಾನು ಏನು ಮಾಡಲಿ? ಅದು ಯಾವಾಗ ತಾನೆ ನೆಟ್ಟಗಿದೆ? ನಿಮ್ಮ ಜೀವ ಮೂರು ಸ್ಥಾಯಿಗಳಲ್ಲಿ ನಡೆಯುತ್ತಿದೆ ನಿದ್ರಾ, ಸ್ವಪ್ನ, ಜಾಗೃತಿ. ಈ ಮೂರನ್ನೂ ಒಟ್ಟಿಗೆ ಒಂದೇ ಕಾಲದಲ್ಲಿ ಹೊಂದಿಸಿ ಅನುಭವಿಸಬೇಕೆಂದೇ ನಿಮ್ಮ ಜಾತಿಯ ಸತತ ಪ್ರಯತ್ನ. ಸ್ವಪ್ನ ಜಾಗೃತಿ ಇವುಗಳನ್ನು ಬೆರೆಸಿ ಅನುಭವಿಸುವುದು ಅಷ್ಟು ದುಷ್ಕರವಲ್ಲ. ಇದಕ್ಕೆ ನಿದ್ರೆಯನ್ನು ಬೆರೆಸಿಕೊಳ್ಳುವುದು. ಅದು ರಾಮಕೃಷ್ಣರಂಥ ಮಹಾಯೋಗಿಗಳಿಗೆ ಮಾತ್ರ ಸಾಧ್ಯ. ನಿನ್ನಂಥವರ ಪ್ರಯತ್ನ ಜಾಗ್ರದವಸ್ಥೆಯಲ್ಲಿ ಸ್ವಪ್ನಾವಸ್ಥೆಯನ್ನು ತಂದುಕೊಳ್ಳುವುದರಲ್ಲಿ ಮುಗಿಯುತ್ತದೆ. ಅದು ಹಾಲು, ಇದು ನೊರೆ. ರಸಿಕರಿಗೆ ಇಂಥ ನೊರೆ ಹಾಲು ಹೃದ್ಯ. ನಿದ್ರೆ ತರುವುದರಲ್ಲೂ ನೀನು ಗಟ್ಟಿಗ-ಇರಲಿ-ಅಂತೂ ನೀನು ಯತ್ನಶಾಲಿ. ಆದರೆ ನನ್ನಷ್ಟು ಕುಶಲನಲ್ಲ. ನನ್ನ ರಸಸಂಸರ್ಗದಿಂದ ಎಲ್ಲ ಚೈತನ್ಯಕ್ಕೂ ಜಾಗ್ರದವಸ್ಥೆಯಲ್ಲಿ ಸ್ವಪ್ನಾವಸ್ಥೆ ನಿಸ್ಸಂಶಯವಾಗಿ ಪ್ರಾಪ್ತವಾಗುತ್ತದೆ. ಅದು ನಿದ್ರಾಂತವು ಆಗುತ್ತದೆ. ನಿನ್ನ ಕಸಬೂ ನನ್ನ ಕಸಬೂ ಒಂದೇ. ಏಕೆ, ನಿನಗಿಂತ ನಾನು ಹೆಚ್ಚು ಕುಶಲ. ಆದರೆ ನಿಮ್ಮ ಸಮಾಜದಲ್ಲಿ ನಿನಗಿಂತ ನನಗೆ ಹೆಚ್ಚು ತಿರಸ್ಕಾರ. ಏಕೋ ಕಾಣೆ. ಇದರಿಂದ ನನಗೇನೂ ವಿಷಾದವಿಲ್ಲ. ಇದನ್ನು ನಾನು ನಿನಗೆ ಹಾಕಿಕೊಳ್ಳುವ ಅರ್ಜಿ ಎಂದು ತಿಳಿದುಕೊಳ್ಳಬೇಡ. ಇದ್ದ ಸಂಗತಿಯನ್ನು ಹೇಳಿದೆ ಅಷ್ಟೇ.'

ಈಚಲು ಮರ ಇಷ್ಟು ವಾಚಾಳನೆಂದು ನನಗೆ ಗೊತ್ತಿರಲಿಲ್ಲ. ನಾನೂ ಅದೂ ಒಂದೇ ಕಸಬಿನವರೆಂದು ಅದು ಹೇಳಿದ್ದನ್ನು ಕೇಳಿ ನನಗೆ ಸ್ವಲ್ಪ ರೇಗಿತು. ಸರಸ್ವತೀ ಪ್ರಸಾದರೂಪವಾದ ನನ್ನ ಸಾರಸ್ವತ ಸಂಪತ್ತೆಲ್ಲಿ? ಅಜ್ಞಾನಾಂಧ ತಮಸ್ಸನ್ನು ಪ್ರಕೋಪನ ಮಾಡುವ ಅದರ ಸುರೆಯೆಲ್ಲಿ? ಆದರೆ ಅದರ ಮಾತಿನಲ್ಲಿ ಸತ್ಯಾಂಶವಿಲ್ಲದೆ ಇರಲಿಲ್ಲ. ಜಾಗ್ರದವಸ್ಥೆಯಲ್ಲಿ ಸ್ವಪ್ನವನ್ನು ತಂದು ನೆಲೆಗೊಳಿಸುವುದಲ್ಲವೇ ಎಲ್ಲಾ ಕವಿಗಳ ಕಾರ್ಯ? ಅಲ್ಲಿ ಜೀವನದ ಮೂರರಲ್ಲಿ ಎರಡು ಸ್ಥಿತಿಗಳ ಸಮಗ್ರ ದೃಷ್ಟಿ ಸಿಕ್ಕುತ್ತದೆ. ಅದರಿಂದಲೇ ಪ್ರತ್ಯಕ್ಷಕ್ಕಿಂತ ಕಾವ್ಯವೇ ಸತ್ಯಕ್ಕೆ ಹೆಚ್ಚು ಸಮೀಪವಾಗಿದೆ. ಸುರೆಯ ಗುರಿಯೂ ಇದೆಯೇ? ಮದ್ಯಮತ್ತ ಕಾಣುವುದು ತಾನೆ ಏನನ್ನು? ಸುರಾಮತ್ತತೆಯಲ್ಲಿ ಸ್ವಪ್ನ ಜಾಗೃತಿಗಳ ಸಾಮರಸ್ಯವಿದೆಯೇ? ನಾನೂ ಈ ಈಚಲಮರವೂ ಹೇಗೆ ಒಂದೇ ಕಸುಬಿನವರು? ನನ್ನದು ಸತ್ಯಾನ್ವೇಷಣೆ ಇದರದೊ?

ಹೀಗೆಂದುಕೊಳ್ಳುತ್ತಿರುವಾಗ ಈಚಲುಮರ ತನ್ನ ಗರಿಗಳನ್ನು ಸದ್ದು ಮಾಡತೊಡಗಿತು.

'ನೀನು ನನ್ನಕಾರನೋ? ನಾನಲ್ಲವೋ? ಈ ಒಂದೇ ಒಂದು ಉದಾಹರಣೆಯನ್ನು ತೆಗೆದುಕೊ. ಭೂಮಿ ಸುತ್ತುತ್ತದೆಯೋ - ಸೂರ್ಯನೋ? ಭೂಮಿಯೇ - ಸೂರ್ಯನಲ್ಲ - ಎಂಬ ತತ್ವ ನಿಮ್ಮ ಜಾಗ್ರದವಸ್ಥೆಯಲ್ಲಿ ನೆಲೆಗೊಳ್ಳುವುದಕ್ಕೆ ಎಷ್ಟೊಂದು ವರ್ಷಗಳ ಕಾಲ ಹಿಡಿಯಿತು! ಲೆಕ್ಕ ಮಾಡು. ಇದು ನಿಮಗಿನ್ನೂ ಅನುಮಿತ ಸತ್ಯ. ನಾನೋ, ಒಂದೇ ನಿಮಿಷದಲ್ಲಿ ಇದನ್ನು ಅನುಭೂತ ಸತ್ಯವನ್ನಾಗಿ ಮಾಡಬಲ್ಲೆ. ಈ ನೆಲ ಅಸ್ಥಿರ, ಏಕೆ, ಎಲ್ಲವೂ ಅಸ್ಥಿರ, ಒಂದು ಕ್ಷಣದಲ್ಲಿ ಇದ್ದ ಹಾಗೆ ಯಾವುದೂ ಮತ್ತೊಂದು ಕ್ಷಣದಲ್ಲಿ ಇಲ್ಲ. ಇಷ್ಟನ್ನು ತಿಳಿದುಕೊಳ್ಳುವುದಕ್ಕಾಗಿ ಗೌತಮಬುದ್ಧ ಎಷ್ಟು ಕಾಲ, ಎಷ್ಟು ಕಷ್ಟಪಟ್ಟ. ಅವನದೇನು ತಪ್ಪು. ಆತ ಆಶ್ರಯಿಸಿದ ಮರ ಅಷ್ಟು ಮೊದ್ದು. ಆದರೆ ಈ ಕ್ಷಣಿಕತ್ವವಾದ ನನ್ನ ರಕ್ತಗತವಾಗಿದೆ. ಜಗತ್ತೇ ಬರಿಭ್ರಮೆ. ಅದರ ಭ್ರಮಣ ಮಾತ್ರ ಸತ್ಯ. ನೀವು ಜಾಗ್ರದವಸ್ಥೆಯಲ್ಲಿ ಯಾವುದನ್ನು ಋತ ಎನ್ನುತ್ತೀರೋ ಅದೇ ಮಾಯೆ. ನೋಡು, ಈ ಸುಡುವ ಸೂರ್ಯನಿದ್ದಾನೆ ಇಲ್ಲಿ, ಈ ಮಾಯೆಗೆ ಈತನೇ ಮಾಯಾವಿ. ಮಾಯೆ ಎಂದರೆ ಏನು ನಿನಗೆ ಗೊತ್ತೆ?'

'ಹಳ್ಳಕ್ಕೆ ಬಿದ್ದವನನ್ನು ಕಲ್ಲಿನಿಂದ ಹೊಡೆ' ಎಂಬ ಗಾದೆಗೆ ಅನುಸಾರವಾಗಿ, ಕ್ಷುಧ್ರಾಶ್ರಾಂತವಾದ ನನ್ನ ಬುದ್ಧಿಯ ಮೇಲೆ ಈಚಲುಮರ ಇಂಥ ಗಾಢವಾದ ಪ್ರಶ್ನೆಯನ್ನು ಎಸೆಯಬೇಕೆ? ಆದರೆ ಅದು ಮ್ಲೇಚ್ಛತರು, ಕರುಣೆಯನ್ನು ಬೇಡದು - ಕರುಣೆಯನ್ನು ತೋರದು. ನನಗೆ ಗೊತ್ತಿಲ್ಲವೆಂದು ನಾನು ಶರಣಾಗತನಾದೆ.

'ಪಾಪ, ಪಾಪ, ಮಾಯೆಯ ಸ್ವರೂಪವನ್ನು ತಿಳಿದುಕೊಳ್ಳಬೇಕಾದರೆ ಕಷ್ಟ. ಈಗ ಸ್ವಲ್ಪ ಎದ್ದು ನಿಂತುಕೋ ಮೊಳಕಾಲುಗಳ ಸಂದಿಯಲ್ಲಿ ತಲೆಯನ್ನು ಹಾಕು - ಸುತ್ತ ನೋಡು. ಜಗತ್ತು ಹೇಗೆ ಕಾಣುತ್ತದೆ ಹೇಳು. ಅನೇಕ ಪ್ರಾಣಿಗಳಿಗೆ ಜಗದ ಸತ್ಯ ಈ ರೀತಿ ತೋರುತ್ತದೆ. ನಿನಗೆ ಈ ದೃಷ್ಟಿ ಮಾಯೆ, ಹೀಗೆ ಮಾಯೆ ಪರಸ್ಪರ ದೃಷ್ಟಿ ಭೇದದಿಂದ ಉತ್ಪನ್ನವಾದ ಸತ್ಯ ಪರಿಸ್ಥಿತಿ. ನಿನಗೆ ಗೊತ್ತಿರುವುದು ಏಳು ಬಣ್ಣ. ಅದರೀಚೆ ಆಚೆ ಎಷ್ಟೋ ಬಣ್ಣಗಳಿವೆ. ಅದನ್ನು ಕಾಣಬಲ್ಲವರಿಗೆ ಜಗತ್ತು ಬೇರೆ ತರವಾಗಿ ತೋರುತ್ತದೆ. ಎಷ್ಟು ಪ್ರಾಣಿಗಳಿವೆಯೋ ಅಷ್ಟು

ಲೋಕಗಳು. ಒಂದರದು ಇನ್ನೊಂದಕ್ಕೆ ಭ್ರಮೆ. ಈಗ ಮೇಲೆ ಈ ಸೂರ್ಯನನ್ನೇ ನೋಡಿ. ಇಲ್ಲಿ, ಸುಡುತ್ತಾ ಬೆಳ್ಳಗೆ ನೋಡುವುದಕ್ಕೆ ಅಸಾಧ್ಯನಾಗಿದ್ದಾನೆ. ಅಲ್ಲೋ? ಕೆಂಪಗೆ ತಣ್ಣಗೆ ಮೂಡುತ್ತಾ ಇದ್ದಾನೆ. ಅಲ್ಲಿರುವವರ ನಡೆವಳಿಕೆಗೂ ಇಲ್ಲಿರುವವರ ನಡವಳಿಕೆಗೂ ಅರ್ಥಾರ್ಥ ಸಂಬಂಧವಿಲ್ಲ. ಮೈ ಮುರಿತ, ಆಕಳಿಕೆ, ಕಾಫಿ ರೈಲು ದೇವಸ್ಥಾನ, ಕೆರೆ, ಗಂಟೆ, ಸ್ಕೂಲು, ಸಂಧ್ಯಾವಂದನೆ, ಮಿಲ್ಕು, ಮಂಜಿನ ಹನಿ, ಹಕ್ಕಿಯ ಚಿಲಿಪಿಲಿ ಇತ್ಯಾದಿ, ಇತ್ಯಾದಿ ಹುಚ್ಚಾಟಗಳು ಅಲ್ಲಿ. ಅದರಾಚೆ ಏನೂ ಇಲ್ಲ - ನಿದ್ರೆ. ಇಲ್ಲಿನವರಂತೆ ಅಲ್ಲಿನವರು, ಅಲ್ಲಿನವರಂತೆ ಇಲ್ಲಿನವರು, ನಡೆದರೋ?'

ಈಗ ಈಚಲುಮರ ಗಹಗಹಿಸಿ ನಕ್ಕಿತು. ಈ ಎರಡು ಸತ್ಯ ಸ್ಥಿತಿಗಳ ಬೆರಕೆಯೇ ಹುಚ್ಚು ಎನ್ನಿಸಿಕೊಳ್ಳುವ ಸ್ಥಿತಿಯೇ! ನಾನು ಬೆರಗಾದೆ. ಈಚಲು ಮರದ ಗರಿ ಪುನಃ ಸದ್ದು ಮಾಡತೊಡಗಿತು.

'ಅಲ್ಲಿನ ಸತ್ಯ ಇಲ್ಲಿನ ಬೆರಗು - ಇಲ್ಲಿನ ಸತ್ಯ ಅಲ್ಲಿನ ಬೆರಗು. ಇಕೋ ಇದೇ ಸಮಯಕ್ಕೆ ಸೂರ್ಯ ಕಡೆ ಈ ಕಡೆ ಕೆಂಪಗೆ ಮುಳುಗುತ್ತಲೂ ಇದ್ದಾನೆ. ಇಲ್ಲಿನ ಪರಿಸ್ಥಿತಿ ಬೇರೆ. ಇದನ್ನು ವರ್ಣಿಸುವುದು ಆತ್ಮ ಪ್ರಶಂಸೆ ಆಗುವುದರಿಂದ ನಿನ್ನ ಊಹೆಗೆ ಬಿಟ್ಟಿದ್ದೇನೆ. ಈಗ ಬೆಳಗ್ಗೆಯೋ ಮಧ್ಯಾಹ್ನವೋ ಸಂಜೆಯೋ ಸತ್ಯವಾಗಿ ಹೇಳು ನೋಡೋಣ. ಸೂರ್ಯನನ್ನೇ ಕೇಳೋಣವೇ? ಪಾಪ, ಅವನಿಗೂ ಭ್ರಮೆ. ಏಕೆಂದರೆ, ಆತ ಈ ಎರಡು ಸಂಧ್ಯೆಗಳನ್ನೂ ಎರಡು ಕಂಕುಳಲ್ಲಿಯೂ ಯಾವಾಗಲೂ ಇರುಕಿಕೊಂಡೇ ಇದ್ದಾನೆ, ಅರ್ಧ ನಾರೀಶ್ವರನಿಗಿಂತ ಒಂದು ಕೈ ಹೆಚ್ಚು ಈತ. ಆದರೆ ಆತನನ್ನು ಕೇಳಿದರೆ 'ಇಲ್ಲ-ಹಾಗೆಂದರೇನು? ಎಂದೇ ಹೇಳುತ್ತಾನೆ. ತನ್ನ ಮಾಯೆಗೆ ತನಗೇ ಗೊತ್ತಿಲ್ಲದ ದೇವರು ಇದು. ಒಂದು ನಿಲುವಿನಲ್ಲಿ ಎಲ್ಲವೂ ಸತ್ಯ. ಇನ್ನೊಂದರಲ್ಲಿ ಎಲ್ಲ ಭ್ರಮೆ. ಅನೇಕ ಭ್ರಮೆಗಳನ್ನು ಒಟ್ಟುಗೂಡಿಸು. ಈ ಸತ್ಯ ಸಮೂಹವೇ ಭ್ರಮೆ ಅಥವಾ ಬೆರಗು ಎನ್ನಿಸಿಕೊಳುತ್ತಿದೆ. ಈ ಭ್ರಮಸಮಷ್ಟಿಯನ್ನು ವ್ಯಷ್ಟಿವ್ಯಷ್ಟಿಯಾಗಿ ದುರ್ಬಿನಿನಲ್ಲಿ ನೋಡುವಂತೆ ನೋಡು - ಆಗ ಒಂದೊಂದೂ ಸತ್ಯವೇ. ನನ್ನ ರಸದಿಂದ ತೇಜಸ್ವಿಯಾಗಿರುವವನ ನಡೆಯನ್ನೂ ನುಡಿಯನ್ನೂ ನಿರುಕಿಸು. ಆತ ಹೇಗೆ ನಡೆಯುತ್ತಾನೋ, ನುಡಿಯುತ್ತಾನೋ, ಅವುಗಳನ್ನೆಲ್ಲಾ ಯಾರೋ ಎಲ್ಲೋ ಅಂತೂ ಮಾಡುತ್ತಲೂ ಇದ್ದಾರೆ, ನುಡಿಯುತ್ತಲೂ ಇದ್ದಾರೆ. ಅವನ ಎಲ್ಲಾ ಸ್ಥಿತಿಗೂ ಲೋಕದಲ್ಲಿ ಸತ್ಯ ಪ್ರತೀಕವನ್ನು ಕಾಣಬಹುದು. ಹೀಗಿರುವಾಗ, ಆತ ಸತ್ಯ ಸ್ವರೂಪನಲ್ಲದೆ ಮತ್ತೇನು? ಅವನು ತೋರುವುದು ಸತ್ಯದ ಸಮಗ್ರ ದರ್ಶನವನ್ನಲ್ಲವೇ? ಈ ನಿಲುವಿಗೇನು ಯಾರು ಬಯಸುವುದಿಲ್ಲ? ಬಲ್ಲವನಿಗೆ ಈ ಸಮಗ್ರ ದರ್ಶನದಲ್ಲಿಯೇ ಪ್ರೀತಿ ಮತ್ತು ಉತ್ಸಾಹ. ಯೋಗಿಗೆ ತನ್ನ ತುರಿಯಾವಸ್ಥೆಯಲ್ಲಿ ಈ ಸ್ಥಿತಿ ಮತ್ತು ಈ ದರ್ಶನ ಲಭಿಸುತ್ತದೆ.

ಕರ್ಮಣ್ಯ + ಭಿಪ್ರವೃತ್ತೋಪಿ ನೈವ ಕಿಂಚಿತ್ ಕರೋತಿ ಸಃ

ಎನ್ನುವ ಸ್ಥಿತಿ ಅವನದು. ಆದರೆ ಆತ ಸಾಹಸಿ. ಆತನಿಗೆ ತೋಳು ತೀಟೆ ಇದೆ. ಈ ಕಡೆಯಿಂದ ಆ ಕಡೆಗೆ - ಪ್ರತ್ಯಕ್ಷದಿಂದ ಪರೋಕ್ಷ ಜ್ಞಾನದ ದಡಕ್ಕೆ - ಈಜಿಕೊಂಡು ಹೋಗುತ್ತಾನೆ. ನನ್ನ ರಸಸಿದ್ಧನೂ ಅಷ್ಟೇ. ತೆಪ್ಪವಿರುವಾಗ ಈಜುವ ಸಾಹಸವೇಕೆ? ಪ್ರತ್ಯಕ್ಷ ಬಹು ಅಸಮರ್ಪಕವಾದ ಸ್ಥಿತಿ ಎಂದೇ ನಮ್ಮಿಬ್ಬರದೂ ಮತ ಮತ್ತು ವಾದ. ಆದರೆ ನನ್ನ ರಸಾನುಭವ ಬೇಕು ಎಲ್ಲರಿಗೂ - ರಸ ಬೇಡ. ನಿಮ್ಮಿರವೇ ಹೀಗೆ - ಪುಣ್ಯಸ್ಯ ಫಲ... ಮಾನವಾಃ ನಾವೇನು ಮಾಡೋಣ.'

ಈ ಮಾತು ಕೇಳಿ ನನಗೇನೋ ದಿಗ್ಭ್ರಮೆ ಹಿಡಿಯಿತು. ಮಾನವನಿಗೂ ಈ ಈಚಲುಮರಕ್ಕೂ ಇದರ ಅನುಬಂಧಿಗಳ ರಸಕ್ಕೂ ಇರುವ ಅತ್ಯಂತ ಮೋಹಕವಾದ ಸಂಬಂಧ ಈ ಸದ್ದರ್ಶನಾಪೇಕ್ಷೆಯಲ್ಲಿ ಬೇರೂರಿದೆಯೇ! ಎಂದುಕೊಂಡೆ. ಆಮೇಲೆ ಈಚಲುಗರಿಗಳ ಮೂಲಕ ಸೂರ್ಯನನ್ನು ನಿಟ್ಟಿಸುತ್ತಾ 'ಎಲ ಎಲ ಮಾಯಾವಿ!' ಎಂದೆ. ಏಕಕಾಲದಲ್ಲಿ ಎಷ್ಟು ವೇಷ ಹಾಕಬಲ್ಲ ಇವ! ಈತನ ನಿಜ ಸ್ವರೂಪವೇನೋ. ಆದರೆ ಇವನ ಈ ಭ್ರಮೆ ಇಲ್ಲದೆ ಜಗತ್ತೇ ನಡೆಯುವ ಹಾಗಿಲ್ಲ. ಭೂಮಿ ನಿಂತಿದೆ ಎಂದೇ ನಾವು ನಡೆಯಬೇಕು. ನಮ್ಮ ತಲೆ ತಿರುಗಿದಾಗ ಮಾತ್ರ ಅದು ಅಸ್ಥಿರ. ಅದರ ಸತ್ಯ ಸ್ವರೂಪ ನಮಗೆ ತಿಳಿಯಬೇಕಾದರೆ ಇಂಥ ವಿಷಮಾವಸ್ಥೆಯಲ್ಲಿ ಮಾತ್ರ ಸಾಧ್ಯ. ಅದಕ್ಕೆಯೇ ಇದೇ ಸತ್ಯ ಎಂದು ಸ್ಥಾಪಿಸುವ ಮತ ಸ್ಥಾಪಕರೆಲ್ಲರೂ ತಪಶ್ಚರ್ಯೆಯಿಂದ ವಿಷಮಾವಸ್ಥೆಯನ್ನು ತಂದುಕೊಳ್ಳುತ್ತಾರೋ ಏನೋ! ಕೆಲವರಿಗೆ ಇದು ಪ್ರಕೃತಿದತ್ತವಾಗಿಯೂ ಬರುತ್ತದೆ. ಇಂಥ ವಿಷಮರಿಂದಲೇ ಜಗತ್ತು ನಡೆಯುತ್ತಿದೆ. ಸುರಾಗ್ರಹಣ ಮಾಡುವುದೂ ಈ ವಿಷಮಾವಸ್ಥೆಯನ್ನು ಪಡೆಯಬೇಕೆಂದೇ? ಈ ಈಚಲುಮರವೂ ಸತ್ಯ ನಾರಾಯಣಾಶ್ರಯವೇ? ಇದಕ್ಕೂ ನಾವು ಪ್ರದಕ್ಷಿಣೆ ಮಾಡಬೇಕೇ? ಎಂದುಕೊಳ್ಳುತ್ತಿರುವಾಗ ಅದು:

'ನನ್ನಲ್ಲಿಯೂ ದೇವತಾಂಶವುಂಟು' ಎಂದು ಮರ್ಮರಿಸಿತು. 'ನಾನು ಅನೇಕರಿಗೆ ಮನೆ ದೇವರು. ನೀನು ವ್ರಾತ್ಯ, ನಿನಗೆ ಗೊತ್ತಿಲ್ಲದಿರಬಹುದು. ನನಗೂ ಪೂಜೆ ಪುರಸ್ಕಾರಗಳುಂಟು. ನೀನರಿತಿರುವಷ್ಟು ನಿಕೃಷ್ಟನಲ್ಲ ನಾನು. ನನಗೂ ನಿನಗೂ ಎಷ್ಟೋ ಬಗೆಯಲ್ಲಿ ಸಾಮರಸ್ಯವಿದೆ. ನಿನ್ನಂತೆ ನನಗೂ ಬಯಲು ಕಾಡೇ ಇಷ್ಟ. ನಿನ್ನಂತೆ ನಾನೂ ಸ್ವಪ್ನ ಪ್ರಚೋದಕ, ಸತ್ಯ ಪ್ರಿಯ. ಆದರೆ ನಿನ್ನ 'ಮಡಿ' ಭಾವ ನನಗಿಲ್ಲ. ನಾನು ನಿನ್ನಷ್ಟು ಅಸಹಾಯನೂ ಅಲ್ಲ. ನನಗಿಷ್ಟ ಬಂದ ಕಡೆ ನಾನು ಹೋಗುತ್ತೇನೆ, ನೆಲಸುತ್ತೇನೆ. ಸಿಕ್ಕಿದ ಜಾಗದಲ್ಲಿ ಬೆಳೆಯುತ್ತೇನೆ. ನಾನು ಯೋಗಿಯಂತೆ ಸ್ವತಂತ್ರ. ಇದುವರೆಗೂ ಯಾರೂ ಎಲ್ಲೂ ನನ್ನನ್ನು ಪೋಷಿಸಿ ಬೆಳೆಸಿಲ್ಲ. ನಾನು ಸತ್ತರೆ ಅತ್ತವರೂ ಇಲ್ಲ. ಇದುವರೆಗೆ ಹೀಗೆ ನಡೆಯಿತು. ಆದರೆ ನಿಮ್ಮ ಸ್ವರಾಜ್ಯದಲ್ಲಿ ನನಗೇನಾಗುತ್ತದೋ. ಅದುದು ಆಗಲಿ. ನಾನೇನು ಪರೋಪಜೀವಿಯೇ? ನಿರ್ಭಯ - ಹಾಗೂ ಉಪಕಾರಿ. ಅಂತೂ ಏನಾದರೂ ಆಗಲಿ ಅನುಭವಿಸುವುದನ್ನು ಅನುಭವಿಸಿಯೇ ತೀರಬೇಕಲ್ಲ. ನಹುಷನಂಥ ಮಹಾರಾಜನಿಗೆ ಇಂದ್ರಪದವಿ ಬಂದಾಗ ಮಹರ್ಷಿಗಳೇ ಪಲ್ಲಕ್ಕಿ ಹೊರಬೇಕಾಯಿತಂತೆ. ಇನ್ನು ಜನಕ್ಕೇ ಇಂದ್ರಪದವಿ ಬಂದಾಗ ಕೇಳಬೇಕೇ? ನನ್ನಿಂದ ಬೆಲ್ಲ ಮಾಡಿಸಿದರೂ ಮಾಡಿಸಿದರೇ! ಆ ಕಥೆ ಇರಲಿ, ಈಗ ಹಸಿದಿದೀಯೆ ಇಗೋ ತಿನ್ನು' ಎಂದು ಮರ್ಮರಿಸಿ ಸುಮ್ಮನಾಯಿತು ಈ ಕಾಂತಾರ ಖರ್ಜೂರ ವೃಕ್ಷ.

ನಾನು ಆಶ್ಚರ್ಯದಿಂದಲೂ ಆಶೆಯಿಂದಲೂ ತಲೆಯನ್ನು ಮೇಲಕ್ಕೆತ್ತಿದೆ. ಕಾಣೆಯೊಂದು ಈಚಲು ಹಣ್ಣನ್ನು ಮುಖದ ಮೇಲೆ ಕೆಡವಿ ಹಾರಿ ಹೋಯಿತು. ಅದು ಬಿದ್ದ ಏಟಿಗೆ 'ಹಾ' ಎಂದು ಮುಖ ಮುಚ್ಚಿಕೊಂಡೆ. ಎಷ್ಟಾದರೂ ಈಚಲುಮರ ಈಚಲುಮರವೇ - ಆದರೆ ಹಣ್ಣು ರುಚಿಯಾಗಿತ್ತು. ಏನು ದೈತ್ಯ ಮರವಯ್ಯಾ ಇದು ಎಂದು ಆ ಹಣ್ಣನ್ನು ಚೀಪುತ್ತಿರುವಾಗ ನನ್ನ ಗೆಳೆಯರು ಬಂದು ನನ್ನ ಸುತ್ತ ನಿಂತು ನಗುತ್ತಿದ್ದರು.

ಅಂದಿನಿಂದ ನನಗೂ ಈ ವೃಕ್ಷಕ್ಕೂ ಸ್ನೇಹ ಬೆಳೆದಿದೆ. ಈ ಸ್ನೇಹ ಹೇಗೆ ತಿರುಗುತ್ತದೆಯೋ ನೋಡಬೇಕು.

ಕೃಪೆ : ಈಚಲುಮರದ ಕೆಳಗೆ

## ಹೊರನಾಡಿನಲ್ಲಿ ಕನ್ನಡದ ಗೆಲುವು

*(. . . ಪುಟ ೩ರಿಂದ)*

ಕಚೇರಿಯಾಗಿ ಕಾಣಿಸಿಕೊಳ್ಳಲಿಲ್ಲ. ಒಂದು ಮನೆಯ ವಾತಾವರಣ ಅಂದು ಕನ್ನಡ ಭವನದಲ್ಲಿ ಸೃಷ್ಟಿಯಾಗಿತ್ತು. ಅಧಿಕಾರಿಗಳ ಸ್ವಾಗತೋಪಚಾರ, ಪ್ರೀತಿ ವಿಶ್ವಾಸದಲ್ಲಿ ಆತ್ಮೀಯತೆಯಿತ್ತು. ನಮ್ಮವರೆಂಬ ಭಾವನೆಯಿತ್ತು. ಕರ್ನಾಟಕದ ಹೊರಗೆ ಕನ್ನಡ ಸಂಸ್ಕೃತಿ ಕಡಿದು ಹೋಗಬಾರದೆಂಬ ಎಚ್ಚರಿಕೆ ಅಲ್ಲಿ ಮೊಳಕೆಯೊಡೆದಂತೆ ಕಾಣುತ್ತದೆ. ಒಟ್ಟಿನಲ್ಲಿ ಈ ಸಮಾವೇಶ ರಾಷ್ಟ್ರಮಟ್ಟದಲ್ಲಿ ಕನ್ನಡದ, ಕರ್ನಾಟಕದ ಹಿತವನ್ನು ಪೋಷಿಸುತ್ತಿದೆ, ಬೆಳೆಸುತ್ತದೆ.

ಕನ್ನಡಿಗರು ಎಲ್ಲೆಲ್ಲಿ ಮನೆ ಮಾಡಿಕೊಂಡಿದ್ದಾರೋ, ಸ್ಥಾನಮಾನ ಪಡೆದು ಗಳಿಸಿಕೊಂಡ್ಡಾರೋ ಅಲ್ಲಲ್ಲಿ ಕನ್ನಡದ ಕಂಪನ್ನು, ಕರ್ನಾಟಕ ಸಂಸ್ಕೃತಿಯ ಬಣ್ಣ ಬಿಸಿಯನ್ನು ಗಾಢಗೊಳಿಸುವುದು ಅವರ ಆದ್ಯ ಕರ್ತವ್ಯ. ಸಂಘ ಸಂಸ್ಥೆಗಳನ್ನು ಕಟ್ಟಿ ರಚನಾತ್ಮಕ ಕಾರ್ಯದಲ್ಲಿ ಭಾಗಿಯಾದರೆ ಮಾತ್ರ ಇತರರು ನಮ್ಮನ್ನು ಗೌರವಿಸುತ್ತಾರೆ. ಇದಕ್ಕೆ ಕರ್ನಾಟಕ ಸರಕಾರದ ಪ್ರೋತ್ಸಾಹಬೇಕು. ಇದು ಜಂಟಿ ಜವಾಬ್ದಾರಿಯ ಕೆಲಸವೂ ಹೌದು. ಭಾಷಾ ಅಲ್ಪಸಂಖ್ಯಾಕರ ಹಿತವನ್ನು ಯಾವ ರಾಜ್ಯ ಸರಕಾರವೂ ನಿರ್ಲಕ್ಷಿಸುವಂತಿಲ್ಲ. ಕನ್ನಡಿಗರು ನೆಲೆ ನಿಂತಿರುವ ರಾಜ್ಯ ಸರಕಾರದಿಂದಲೂ ಸಿಗುವ ಸವಲತ್ತುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಕೇಂದ್ರ ಸರಕಾರ ಹಿಂದಿ, ಸಂಸ್ಕೃತ ಮೊದಲಾದ ಭಾಷೆಯ ಅಭಿವೃದ್ಧಿಗೆ, ಪ್ರಸಾರಕ್ಕೆ ಪ್ರಚಾರಕ್ಕೆ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತದೆ. ಕನ್ನಡಕ್ಕೂ ಈ ನೆರವು ಸಿಗುವಂತಾಗಲು ರಾಜ್ಯ ಸರಕಾರ ಕೇಂದ್ರದ ಮೇಲೆ ಒತ್ತಡ ಹೇರಬೇಕು. ಎಲ್ಲಿಯವರೆಗೆ ಅತ್ತು ಮಾಡಿ ಕೂಗಿ ಕರೆಯುವುದಿಲ್ಲವೋ ಅಲ್ಲಿಯ ವರೆಗೆ ಕನ್ನಡಿಗರಿಗೆ ಏನೂ ದೊರೆಯದು. ಈ ಕೂಗಿಗೆ ಕರ್ನಾಟಕದ ಜನಪ್ರತಿನಿಧಿಗಳು ದನಿ ಸೇರಸಬೇಕು. ಅಧಿಕಾರಿಗಳು ಮನಸ್ಸು ಮಾಡಬೇಕು. ಇದೆಲ್ಲವನ್ನು ಆಗ ಮಾಡುವ ಹೊರನಾಡ ಕನ್ನಡಿಗರ, ಸಂಘ ಸಂಸ್ಥೆಗಳ ಗಟ್ಟಿ ಸಂಘಟನೆಯೊಂದು ರೂಪುಗೊಳ್ಳಬೇಕು. ಈ ದಿಸೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪಾತ್ರ ಗುರುತರವಾದುದು. ಅಂದಾಗ ಮಾತ್ರ ಕನ್ನಡದ ಗೆಲುವಾಗುತ್ತದೆ. ●

# ಭವಾನಿ ಅಷ್ಟಕ

ನ ತಾತೋ ನ ಮಾತಾ, ನ ಬಂಧುರ್ನ ದಾತಾ
ನ ಪುತ್ರೋ ನ ಪುತ್ರಿ, ನ ಭೃತ್ಯೋ ನ ಭರ್ತಾ,
ನ ಜಾಯಾ ನ ವಿದ್ಯಾ, ನ ವೃತ್ತಿರ್ಮಮೈವ,
ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನಿ ॥ .
ಭವಾಬ್ಧಾವಪಾರೇ ಮಹಾದುಃಖ ಭೀರು :
ಪ್ರಪಾತಃ ಪ್ರಕಾಮೀ ಪ್ರಲೋಭೀ ಪ್ರಮತ್ತ :
ಕುಸಂಸಾರ-ಪಾಶ-ಪ್ರಬಂಧಃ ಸದಾಽಹಂ
ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನಿ ॥
ಪ್ರಜೇಶಂ ರಮೇಶಂ ಮಹೇಶಂ ಸುರೇಶಂ
ದಿನೇಶಂ ನಿಶೀಥೇಶ್ವರಂ ಕದಾಚಿತ್
ನ ಜಾನಮೀ ಚಾನ್ಯತ್, ಸದಾಽಹಂ ಶರಣ್ಯೇ
ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನಿ ॥
ಕುಕರ್ಮೀ ಕುಸಂಗೀ ಕುಬುದ್ಧಿಃ ಕುದಾನಃ
ಕುಲಾಚಾರಹೀನಃ ಕದಾಚಾರಲೀನಃ
ಕುದೃಷ್ಟಿಃ ಕುವಾಕ್ಯಃ ಪ್ರಬದ್ಧ ಸದಾಽಹಂ
ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನೀ ॥
ನ ಜಾನಾಮಿ ದಾನಂ, ನ ಚ ಧ್ಯಾನ ಯೋಗಂ,
ನ ಜಾನಾಮಿ ತಂತ್ರಂ, ನ ಚ ಸ್ತೋತ್ರ ಮಂತ್ರಂ,
ನ ಜಾನಾಮಿ ಪೂಜಾಂ, ನ ಸನ್ಯಾಸಯೋಗಂ,
ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನೀ ॥
ನ ಜಾನಾಮಿ ಪುಣ್ಯಂ, ನ ಜಾನಾಮಿ ತೀರ್ಥಂ
ನ ಜಾನಾಮಿ ಮುಕ್ತಿಂ, ಲಯ ವಾ ಕದಾಚಿತ್,
ನ ಜಾನಾಮಿ ಭಕ್ತಿಂ, ವ್ರತಂ ವಾಪಿ ಮಾತಾ,
ಗತಿಸ್ತ್ವಂ, ಗತಿಸ್ತ್ವಂ ತ್ವಮೇಕಾ ಭವಾನಿ ॥
ವಿವಾದೇ ವಿಷಾದೇ ಪ್ರಮಾದೇ ಪ್ರವಾಸೇ
ಜಲೇ ಚಾನಲೇ ಪರ್ವತೇ ಶತ್ರು ಮಧ್ಯೇ
ಅರಣ್ಯೇ ಶರಣ್ಯೇ ಸದಾ ಮಾಂ ಪ್ರಪಾಹಿ
ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನಿ ॥
ಅನಾಥೋ ದರಿದ್ರೋ, ಜರಾ - ರೋಗಯುಕ್ತೋ, ದೀನಃ
ಮಹಾಕ್ಷಿನ್ನದೀನಃ, ಸದಾಜಾಡ್ಯ ವಕ್ತ್ರ :
ವಿಪತ್ತೌ ಪ್ರವಿಷ್ಟಃ ಪ್ರಣಷ್ಟಃ, ಸದಾಽಹಂ,
ಗತಿಸ್ತ್ವಂ, ಗತಿಸ್ತ್ವಂ ತ್ವಮೇಕಾ ಭವಾನೀ ॥

-- ಶ್ರೀ ಜಗದ್ಗುರು ಶಂಕರಾಚಾರ್ಯ

## ಸುತ್ತಮುತ್ತ

### ಮೈಸೂರು ಸಂಗೀತ ವಿದ್ಯಾಲಯ ಡೊಂಬಿವಲಿ ಕರ್ನಾಟಕ ಸಂಗೀತ ಒಂದು ಸಿಂಹಾವಲೋಕನ ವಿಚಾರಣ ಸಂಕಿರಣ

**"21ನೇ ಶತಮಾನದಲ್ಲಿ ಕರ್ನಾಟಕ ಸಂಗೀತದ ಭವಿಷ್ಯ ಉಜ್ವಲ" ಡಾ. ಆರ್. ಸತ್ಯನಾರಾಯಣ**

"ಇಂದು ಬೃಹತ್ ವೃಕ್ಷದಂತೆ ಬೆಳೆದಿರುವ ಕರ್ನಾಟಕ ಸಂಗೀತದ ಬೇರುಗಳು ಬಹಳ ಆಳವಾಗಿರುವುದರಿಂದ ಪಾಶ್ಚಾತ್ಯ ಧಾಳಿಗೆ ಒಳಗಾದರೂ ಅದನ್ನು ತನ್ನದಾಗಿಸಿಕೊಂಡು ತನ್ನದೇ ವೈಶಿಷ್ಟ್ಯತೆಯನ್ನು ಕಾಪಾಡಿಕೊಳ್ಳುವ ಶಕ್ತಿ ಕರ್ನಾಟಕ ಸಂಗೀತಕ್ಕೆ ಇದೆ. ಅದರ ಭವಿಷ್ಯ ಉಜ್ವಲ' ಎಂದು ಸುಪ್ರಸಿದ್ಧ ಸಂಗೀತ ತಜ್ಞ ಡಾ. ಆರ್. ಸತ್ಯ ನಾರಾಯಣರವರು ಡೊಂಬಿವಲಿ ಮೈಸೂರು ಸಂಗೀತ ವಿದ್ಯಾಲಯದವರು 21ನೇ ಶತಮಾನದ ಆರಂಭದ ಸವಿನೆನಪಿಗಾಗಿ ಏರ್ಪಡಿಸಿದ್ದ 'ಕರ್ನಾಟಕ ಸಂಗೀತ ಒಂದು ಸಿಂಹಾವಲೋಕನ' ವಿಚಾರ ಸಂಕಿರಣದಲ್ಲಿ ಭಾಷಣಕಾರರಾಗಿ ನುಡಿದರು. ಶ್ರೀಯುತರು ಕರ್ನಾಟಕ ಸಂಗೀತದ ಇತಿಹಾಸವನ್ನು ವಿವರಿಸುತ್ತಾ 'ಕರ್ನಾಟಕ ಸಂಗೀತ' ಎಂಬ ಹೆಸರು ಮಹಾರಾಷ್ಟ್ರದ ವಿಷ್ಣು ನಾರಾಯಣ ಭಾತ್ಖಂಡೆಯವರು ಪ್ರಕಟಿಸಿದ ಕಾಶೀನಾಥ ಅಪ್ಪಾ ತುಳಸೀ ಘುರಳೀಕರ್‌ರ ಬೆಸೆದ 'ಸಂಗೀತ ಸುಧಾಕರ' ಗ್ರಂಥದಲ್ಲಿ ಮೊಟ್ಟ ಮೊದಲಿಗೆ ಕಂಡು ಬರುತ್ತದೆ ಎಂದು ತಿಳಿಸಿದರು. 13ನೇ ಶತಮಾನದ ಮೊದಲು ಭಾರತಾದ್ಯಂತ ಪ್ರಚಲಿತದಲ್ಲಿದ್ದ 4000ಕ್ಕೂ ಹೆಚ್ಚು ವಿವಿಧ ರೀತಿಯ ಕಾರ್ಯಕ್ರಮ ಸಾವಿರಾರು ದೇಶೀ ತಾಳಗಳ ಪದ್ಧತಿಯನ್ನು ವಿವರಿಸಿದರು. 14ನೇ ಶತಮಾನದಲ್ಲಿ ವಿಜಯನಗರ ಸಂಸ್ಥಾಪಕರಾದ ಶ್ರೀ ವಿದ್ಯಾರಣ್ಯರು ಪ್ರಚಲಿತಕ್ಕೆ ತಂದ 15 ಮೇಳ ಕರ್ತ ರಾಗಗಳು ನಂತರ ಹರಿದಾಸರುಗಳು ರಚಿಸಿದ ಸುಳಾದಿ, ಉಗಾಭೋಗ, ಪಲ್ಲವಿ ಅನುಪಲ್ಲವಿ ಚರಣಗಳನ್ನೊಳಗೊಂಡ ಕೃತಿಗಳನ್ನು ತಾಳ ಮತ್ತು ಮೇಳಗಳ ಚೌಕಟ್ಟಿನಲ್ಲಿ ಮೂಡಿಸಿದ ರೀತಿಯನ್ನು ಶ್ರೀ ಪುರಂದರದಾಸರು ಮಕ್ಕಳೂ ಸಹ ಕಲಿಯಲು ಅನುಕೂಲವಾಗುವಂತೆ ರಚಿಸಿದ ಸಂಗೀತ ಶಿಕ್ಷಣ ಪದ್ಧತಿಯನ್ನು ವಿವರಿಸಿ ಕನ್ನಡಿಗ ವೆಂಕಟಮುಖಿಯವರ 72 ಮೇಳ ಕರ್ತರಾಗಗಳು, ಇವುಗಳಿಂದ ಸ್ಫೂರ್ತಿ ಪಡೆದು ಅದೇ ದಾಟಿಯಲ್ಲಿ ಕೃತಿಗಳನ್ನು ರಚಿಸಿ ಕರ್ನಾಟಕ ಸಂಗೀತವನ್ನು ಸಂಪದ್ಭರಿತವನ್ನಾಗಿಸಿದ ತಮಿಳುನಾಡಿನ ಶ್ರೀ ತ್ಯಾಗರಾಜ, ಮುದ್ದು ಸ್ವಾಮಿ ದೀಕ್ಷಿತರು, ಶ್ಯಾಮ ಶಾಸ್ತ್ರಿಗಳು ಹಾಗೂ ಆಂಧ್ರದ ಭದ್ರಾಚಲ ರಾಮದಾಸ, ಅಣ್ಣಮಾಚಾರ್ಯ ಕೇರಳದ ಯಕ್ಷಗಾನ ಕೃತಿಗಳ ಕೊಡುಗೆಯನ್ನು ಸವಿಸ್ತಾರವಾಗಿ ವಿವರಿಸಿದರು.

ಪ್ರಸ್ತುತ ಗುರುಕುಲ ಪದ್ಧತಿ ಕಡಿಮೆಯಾಗುತ್ತಿದ್ದರೂ ಸಂಗೀತ ಸಂಸ್ಥೆಗಳು, ವಿಶ್ವವಿದ್ಯಾಲಯಗಳ ಸಂಗೀತ ಶಿಕ್ಷಣ, ಪ್ರಸಾರ ಮಾಧ್ಯಮಗಳಾದ ರೇಡಿಯೋ, ದೂರದರ್ಶನಗಳಲ್ಲಿ ಪ್ರಸಾರವಾಗುತ್ತಿರುವ ಕರ್ನಾಟಕ ಸಂಗೀತ, ಇವುಗಳಿಂದ ಜನಪ್ರಿಯತೆ ಹೆಚ್ಚುತ್ತಿದೆ. ಕೇವಲ ದಕ್ಷಿಣ ಭಾರತಕ್ಕೆ ಸೀಮಿತವಾಗಿದ್ದ ಕರ್ನಾಟಕ ಸಂಗೀತವು ಈಗ ಭಾರತದಲ್ಲೆಲ್ಲಾ ಅಲ್ಲದೇ ಪಾಶ್ಚಾತ್ಯ ದೇಶಗಳ ವಿಶ್ವವಿದ್ಯಾಲಯಗಳಲ್ಲೂ ಪಠ್ಯಕ್ರಮವಾಗಿ ಅಳವಡಿಸಲ್ಪಟ್ಟು ವಿಶ್ವಾದ್ಯಂತ ಹಬ್ಬುತ್ತಿದೆ ಎಂದು ತಿಳಿಸಿದರು.

ಕಂಪ್ಯೂಟರ್ ಯುಗವೆನಿಸಿದ 21ನೇ ಶತಮಾನದಲ್ಲಿ ಕಂಪ್ಯೂಟರ್ ವೆಬ್‌ಸೈಟ್ ಮೂಲಕ ಸಂಗೀತ ಶಿಕ್ಷಣ ಸಾಧ್ಯವಿದೆ. ಪಾಶ್ಚಾತ್ಯ, ಜಾಸ್, ಬೀಟಲ್ ಸಂಗೀತಗಳನ್ನು ಕರ್ನಾಟಕ ಸಂಗೀತದಲ್ಲಿ ಸಮೀಕರಣ ಮಾಡುವ ಪ್ರಯತ್ನಗಳನ್ನು ಮಾಡುತ್ತಿದ್ದರೂ, ತನ್ನ ಬೇರು ಬಹಳ ಆಳವಾಗಿರುವುದರಿಂದ ಕರ್ನಾಟಕ ಸಂಗೀತಕ್ಕೆ ಯಾವ ಅಪಾಯವೂ ಇಲ್ಲ. ಹಿಂದಿನ ವಾಗ್ಗೇಯಕಾರರ ಕೃತಿಗಳಿಗೇ ಸಂತೃಪ್ತಿಯನ್ನು ಹೊಂದದೆ ಹಳೆಯದನ್ನು ಉಳಿಸಿಕೊಂಡು ಹೊಸ ಕೃತಿಗಳನ್ನು ರಚಿಸಲು ಶ್ರಮಿಸಬೇಕು ಎಂದು ಅಭಿಪ್ರಾಯಪಟ್ಟರು.

ಇದಕ್ಕೂ ಮೊದಲು ಶ್ರೀ ಪುರಂದರ ತ್ಯಾಗರಾಜರ ಆರಾಧನೆಯ ಅಂಗವಾಗಿ ವಿದ್ಯಾಲಯ ವಿದ್ಯಾರ್ಥಿಗಳಿಂದ ಸಂಗೀತ ನಡೆಯಿತು. ಪುಟಾಣಿಗಳು ಶ್ರೀ ಪುರಂದರದಾಸರ ಸಿಳ್ಳಾರಿ ಗೀತೆಗಳನ್ನು ಸಾದರಪಡಿಸಿದರೆ, ಸೀನಿಯರ್ ವಿದ್ಯಾಥಿಗಳಾದ ಸುಕನ್ಯ, ಅರುಣ, ಪವಿತ್ರ, ಸುಶೀಲ, ಸೌಮ್ಯಳ ನೇತತ್ವದಲ್ಲಿ ಶ್ರೀ ಪುರಂದರ ತ್ಯಾಗರಾಜ ಕೃತಿಗಳನ್ನು ಆಲಾಪನೆ ಸ್ವರ ಪ್ರಸಾರದೊಂದಿಗೆ ಸಾದರಪಡಿಸಿದರು. ವಿದ್ವತ್ ವಿದ್ಯಾರ್ಥಿಗಳಾದ ಶ್ಯಾಮಲ ಮತ್ತು ಅನುರಾಧಾ 'ದಾಸ ಶ್ರೇಷ್ಠ ಪುರಂದರ ನಾದ ಬ್ರಹ್ಮ ತ್ಯಾಗರಾಜ' ಎಂಬ ಪಲ್ಲವಿಯನ್ನು ರಾಗ, ತಾಳ, ಪಲ್ಲವಿಗಳೊಡನೆ ಸಾದರಪಡಿಸಿ ರಸಿಕರ ಮೆಚ್ಚುಗೆ ಪಡೆದರು. ವಿದ್ಯಾಲಯದ ವೀಣೆ, ಪಿಟೀಲು, ಹಿಂದೂಸ್ತಾನೀ ವಿದ್ಯಾರ್ಥಿಗಳಿಂದಲೂ ಸಂಗೀತ ನಡೆಯಿತು. ಕರ್ನಾಟಕ ಮತ್ತು ಹಿಂದೂಸ್ತಾನೀ ಸಂಗೀತ ಸಾಮ್ಯತೆ ಬಗ್ಗೆ ವಿದುಷಿ ಉಮಾ ನಾಗಭೂಷಣ್ ಮತ್ತು ರಸಿಕಾ ಫಡ್ಕೆ ನಡೆಸಿಕೊಟ್ಟ ಸಂಗೀತ ರೂಪಕವು ರಸಿಕರ ಮತ್ತು ವಿದ್ವಾಂಸರ ಮೆಚ್ಚುಗೆ ಪಡೆಯಿತು.

ವಿದ್ಯಾಲಯದ ನೃತ್ಯ ವಿಭಾಗದ ವಿದ್ಯಾರ್ಥಿಗಳಿಂದ ಭರತ ನಾಟ್ಯ ಪ್ರದರ್ಶನ ನಡೆಯಿತು.

ಆರಂಭದಲ್ಲಿ ಶ್ರೀಮತಿ ಉಮಾ ನಾಗಭೂಷಣ್ ಸ್ವಾಗತಿಸಿದರು. ನಾಗಭೂಷಣ್ ಅತಿಥಿಗಳನ್ನು ಪರಿಚಯಿಸಿದರು. ಸುಶೀಲಾ ವಿದ್ಯಾಲಯದ ವರದಿ ಮಂಡಿಸಿದರು. ಶ್ಯಾಮಲಾ ವಂದಿಸಿದರು. ಭುವನೇಶ್ವರಿ ಕಾರ್ಯಕ್ರಮ ನಿರ್ವಹಿಸಿದರು.

ಕರ್ನಾಟಕ ಸರಕಾರದ ಸಂಗೀತ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಸರಕಾರದ ಅರ್ಹತಾ ಪತ್ರ ವಿತರಣೆ ಮಾಡಲಾಯಿತು. ಸಂಗೀತ ವಿದ್ಯಾಲಯದ ಶಿಷ್ಯ ವೇತನ ಯೋಜನೆಯಲ್ಲಿನ ಉತ್ತಮ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡಲಾಯಿತು. ಶ್ರೀ ಬಿ.ಕೆ. ಅನಂತರಾಮಯ್ಯ ಹೆಚ್.ಎಸ್. ಅಡೂರ್, ಶ್ರೀಧರ್ ಜಯದಗ್ನಿ ಯವರು ಶಿಷ್ಯ ವೇತನ ನಿಧಿಗೆ ತಲಾ ರೂ. 5000ಗಳನ್ನು ಕೊಡುಗೆಯಾಗಿ ನೀಡಿದರು.

ಸುಮಾರು 9 ಗಂಟೆಗಳ ಕಾಲ ನಡೆದ ಈ ಕಾರ್ಯಕ್ರಮಕ್ಕೆ ಜನರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

### ಪುರಂದರದಾಸರು ಸಂದೇಶ ಸಮಾಜ ಸುಧಾರಣೆಗೆ ಸಹಕಾರಿ -ಶಿಶುಪಾಲ್ ಜೈನ್

'ಶ್ರೀ ಪುರಂದರದಾಸರ ಪದಗಳನ್ನು ಭಕ್ತಿಯಿಂದ ನಿತ್ಯವೂ ಹಾಡಿದರೆ ಮನಸ್ಸು ಪರಿಶುದ್ಧವಾಗಿ ಇರುವ ದುರ್ನಡತೆಗಳೆಲ್ಲಾ ನಿವಾರಣೆಯಾಗಿ ಸನ್ಮಾರ್ಗಕ್ಕೆ ದಾರಿ ಮಾಡಿಕೊಡುತ್ತದೆ. ಇದರಿಂದ ಸಮಾಜ ಸುಧಾರಿಸಿ ಉತ್ತಮ ರಾಷ್ಟ್ರ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ. ಉತ್ತಮ ಜ್ಞಾನಮಾರ್ಗ ಬೋಧನೆಗಳುಳ್ಳ ಕೃತಿಗಳನ್ನು ದಾಸರು ರಚಿಸಿದ್ದಾರೆ. ಇಂತಹ ಪುಣ್ಯ ಪುರುಷರ ಆರಾಧನೆಯನ್ನು ಮುಂಬಯಿ ಕನ್ನಡ ಸಂಘವು ಕಳೆದ 60 ವರ್ಷಗಳಿಂದಲೂ ಆಚರಿಸುತ್ತಾ ಬಂದಿರುವುದು ಸ್ತುತ್ಯರ್ಹ' ಎಂದು ಜೀನೇಶ್ವರ ಕೋ ಕ್ರೆಡಿಟ್ ಸೊಸೈಟಿಯ ಅಧ್ಯಕ್ಷರಾದ ಶಿಶುಪಾಲ್ ಜೈನ್‌ರವರು ಮುಂಬಯಿ ಕನ್ನಡ ಸಂಘವು ಫೆ. 25ರಂದು

ಮೈಸೂರು ಅಸೋಸಿಯೇಶನ್ ಸಭಾಗೃಹದಲ್ಲಿ ಆಚರಿಸಿದ ಶ್ರೀ ಪುರಂದರದಾಸರ 437ನೇ ಆರಾಧನಾ ಮಹೋತ್ಸವ ಸಂದರ್ಭದಲ್ಲಿ ನುಡಿದರು. ಅವರು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಕನ್ನಡಿಗರಿಗೆ ಉತ್ತಮ ಸೇವೆ ಸಲ್ಲಿಸುತ್ತಿರುವ ಮುಂಬಯಿ ಕನ್ನಡ ಸಂಘದ ಚಟುವಟಿಕೆಗಳನ್ನು ಪ್ರಶಂಸಿಸಿ ತಾವು ಸಂಘಕ್ಕೆ ತಮ್ಮ ಕೈಲಾದ ಸಹಾಯ ಮಾಡುವುದಾಗಿ ಭರವಸೆ ಇತ್ತರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ. ಗಣೇಶ್ ಎನ್. ಉಪಾಧ್ಯರವರು ಆರಾದನೆ ಎಂದರೆ ಕೇವಲ ವ್ಯಕ್ತಿ ಪೂಜೆ ಅಲ್ಲ. ದಾಸವರೇಣ್ಯರಂತಹ ಪುಣ್ಯ ಪುರುಷರು ಮಾಡಿದ ಮಹತ್ಕಾರ್ಯಗಳ ಸ್ಮರಣೆ ಮಾಡಿ ಮುಂದಿನ ಜನಾಂಗಕ್ಕೆ ಅವರ ಸಂದೇಶಗಳನ್ನು ಮನದಟ್ಟು ಮಾಡಿಸಿ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಳ್ಳುವುದಾಗಿ ಉತ್ಸವದ ಉದ್ದೇಶ ಎಂದು ತಿಳಿಸಿ ಶ್ರೀ ಪುರಂದರದಾಸರಾದಿಯಾಗಿ ಕರ್ನಾಟಕದಲ್ಲಿ 240ಕ್ಕೂ ಹೆಚ್ಚು ದಾಸರೂ ರಚಿಸಿರುವ ಕೃತಿಗಳನ್ನು ಅಧ್ಯಯನ ಮಾಡಿದರೆ ದಾಸವರೇಣ್ಯರು ಕನ್ನಡ ಸಾಹಿತ್ಯಕ್ಕೆ, ಸಂಗೀತಕ್ಕೆ ಭಕ್ತಿ ಮಾರ್ಗಕ್ಕೆ ನೀಡಿರುವ ಮಹತ್ವದ ಅರಿವಾಗುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಈ ಅಧ್ಯಯನ ಅವಶ್ಯಕ ಎಂದು ಕರೆ ನೀಡಿದರು.

ಕಾರ್ಯಕ್ರಮದಂಗವಾಗಿ ಶ್ರೀ ಪುರಂದರದಾಸರ ನಾಮಗಳ ಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ವಯೋಮಿತಿಗನುಗುಣವಾಗಿ ಮೂರು ವಿಭಾಗಗಳನ್ನು ಮಾಡಲಾಗಿತ್ತು. ಇದರಲ್ಲಿ ಸುಮಾರು 75ಕ್ಕೂ ಹೆಚ್ಚು ಸ್ಪರ್ಧಾರ್ಥಿಗಳು ಭಾಗವಹಿಸಿದ್ದರು. ಸ್ಪರ್ಧೆಯ ತೀರ್ಪುಗಾರರಾಗಿ ಶ್ರೀಮತಿ ಡಾ. ಶಾರದಾ ಗದ್ವಾಲ್, ಶ್ರೀಮತಿ ವನಜಾ ರಾಜನ್ ಹಾಗೂ ಶ್ರೀಮತಿ ಜ್ಯೋತಿ ಭಟ್ ಸಹಕರಿಸಿದರು.

ಸಂಘದ ಗೌರವ ಕಾರ್ಯದರ್ಶಿ ಜಿ.ಎಸ್. ನಾಯಕ್‌ರವರು ವಂದನಾರ್ಪಣೆ ಮಾಡಿದರು. ಮಂಗಳಾರತಿ ಮತ್ತು ಪ್ರಸಾದ ವಿನಿಯೋಗದೊಂದಿಗೆ ಸಮಾರಂಭ ಮುಕ್ತಾಯವಾಯಿತು.

### 'ಸ್ವಾಮಿ ಸ್ವಾಮಿ'

ವಿಶ್ವಾ ಖಂಡದಲ್ಲಿಯೇ ಎರಡನೆಯ ಸ್ಥಾನ ಪಡೆದಿರುವ ಹೈದರಾಬಾದಿನ ರಾಮೋಜಿ ರಾವ್ ಫಿಲ್ಮ್ ಸಿಟಿಯಲ್ಲಿ ಕನ್ನಡ ಹಾಸ್ಯಮಯ 'ಟಿ.ವಿ.' ಸೀರಿಯಲ್ 'ಸ್ವಾಮಿ ಸ್ವಾಮಿ' ಚಿತ್ರೀಕರಣ ನಡೆಯುತ್ತಿದೆ. ಈ ಚಿತ್ರ ಸರಣಿಯನ್ನ ಬರೆದು ನಿರ್ದೇಶಿಸಿದವರು. ಪೂಣೆಯ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತುಗೊಂಡ ಖ್ಯಾತ ನಿರ್ದೇಶಕ ಪಿ.ಎನ್. ರಾಮಚಂದ್ರ, ಮುಂಬಯಿಯಲ್ಲಿ ನೆಲೆಸಿ ಅನೇಕ ಹಿಂದಿ, ಕನ್ನಡ ಧಾರಾವಾಹಿ ನಿರ್ದೇಶಿಸಿದ ಇವರು ಮೂಲತಃ ಉಡುಪಿಯವರು.

ಈಗಾಗಲೇ 6 ಕಂತಿನ ಚಿತ್ರೀಕರಣ ಮತ್ತು ಸಂಕಲನ ಪೂರ್ಣಗೊಂಡಿದ್ದು ಮುಂದಿನ ಚಿತ್ರೀಕರಣದ ಕೆಲಸ ಭರದಿಂದ ನಡೆಯುತ್ತಿದೆ. ಈ ಚಿತ್ರ ಸರಣಿಯ ಮುಖ್ಯ ಸಹ ನಿರ್ದೇಶನ- ಪ್ರದೀಪ್ ಬಂಗೇರ, ಸಹನಿರ್ದೇಶನ- ಸುರೇಂದ್ರ ಕುಮಾರ್, ಛಾಯಾಗ್ರಹಣ- ಮಿಲಿಂದ್ ಮಹಲೆ, ಸಹಾಯ- ನಿಲೇಶ್ ಪರ್‌ಮಾರೆ, ಶೀರ್ಷಿಕೆ- ಹಾಡು ಮೋಹನ್ ಮಾರ್ನಾಡ್, ವಿಜಯಪ್ರಕಾಶ್ ಮತ್ತು ಮಹಲೆ, ಸಂಕಲನ- ಪಿ.ಎನ್. ರಾಮಚಂದ್ರ, ಸಹಾಯ- ಸುರೇಂದ್ರಕುಮಾರ್.

ಕಲಾವಿದರು- ಕೃಷ್ಣ ಭಟ್ (ದ್ವಿಪಾತ್ರ), ಕಿಶೋರಿ ಬಲ್ಲಾಳ್, ಅಹಲ್ಯ ಬಲ್ಲಾಳ್, ಮೋಹನ್ ಮಾರ್ನಾಡ್, ಕೆ.ವಿ.ಆರ್. ಐತಾಳ್, ಹಾಮಾ. ಕನಕ, ಸುರೇಂದ್ರಕುಮಾರಂ, ಅಮೃತ್ ದೇಸಾಯಿ, ವರ್ಷಾ ಹುಕ್ಕೇರಿ, ವಿಜಯಲಕ್ಷ್ಮೀ, ಎಸ್.ಡಿ. ಕುಮಾರ್, ಪ್ರಹ್ಲಾದ್ ಜೋಶಿ, ಭೀಮ್‌ಸೇನ್, ಸಂಜೀವ್‌ಕುಮಾರ್ ಮತ್ತಿತರರು.

'ಸ್ವಾಮಿ ಸ್ವಾಮಿ' 'ETV' ಕನ್ನಡ ಚಾನೆಲ್‌ನಲ್ಲಿ ಪ್ರಸಾರಗೊಳ್ಳಲಿದೆ. ತುಳು, ಕನ್ನಡ ಬಾಂಧವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಮುಂಬಯಿಯಲ್ಲಿ ಕಾಣ ಸಿಗುವ 'ಚಂದನ' 'ಉದಯ ಟಿ.ವಿ.' ಚಾನೆಲ್‌ನ ಹಾಗೆ 'ETV' ಕನ್ನಡ ಚಾನೆಲ್ ಕೂಡ ಒಳ್ಳೆಯ ಕಾರ್ಯಕ್ರಮವನ್ನು ಪ್ರಸಾರಗೊಳಿಸುತ್ತಿದೆ. ಆದ್ದರಿಂದ ನೀ ನಿಮ್ಮ ಕೇಬಲ್, ಅಪರೇಟರನ್ನು ಆಗ್ರಹಿಸಿ 'ETV' ಕನ್ನಡ ಚಾನೆಲನ್ನು ನಿಮ್ಮ ಟಿ.ವಿ.ಯಲ್ಲಿ ಕೂಡ ಅಳವಡಿಸಿಕೊಳ್ಳಿ.

ಇದರಿಂದಾಗಿ ನಿಮ್ಮಿಂದ ಮುಂಬಯಿ ಕನ್ನಡಿಗರಿಗೆ ಮುಂದಿನ ಕಾರ್ಯಕ್ರಮಕ್ಕೆ ಪ್ರೋತ್ಸಾಹ ಸಿಕ್ಕಿದಂತಾಗುತ್ತದೆ. ಮತ್ತು 'ETV' ಯಲ್ಲಿ ಬರುವ ಉತ್ತಮ ಕನ್ನಡ ಕಾರ್ಯಕ್ರಮಗಳೊಂದಿಗೆ ಮುಂಬಯಿ ಕನ್ನಡಿಗರು ನಟಿಸಿದ 'ಸ್ವಾಮಿ ಸ್ವಾಮಿ' ಧಾರಾವಾಹಿಯನ್ನು ನಮಗೆಲ್ಲರಿಗೂ ವೀಕ್ಷಿಸಲು ಅನುವಾಗುತ್ತದೆ.

### ಎಂ.ಎನ್. ಅಮೀನ್ ದತ್ತಿ ಕಾರ್ಯಕ್ರಮ

ಮುಂಬಯಿ: ಬದುಕಿಗಾಗಿ ಊರು ಬಿಟ್ಟು ಮುಂಬಯಿ ಸೇರಿದ ದಕ್ಷಿಣ ಕನ್ನಡಿಗರಿಗೆ ತಮ್ಮ ಕರಾವಳಿಯ ಮಣ್ಣಿನ ಬದುಕಿನ ಆಗುಹೋಗುಗಳ ಬಗ್ಗೆ ಇನ್ನೂ ಆಸಕ್ತಿ-ಕಳವಳ ಉಳಿದಿರುವುದು ಅಭಿಮಾನದ ಸಂಗತಿ. ಪ್ರಾಯಶಃ ಅದೇ ಆ ಮಣ್ಣಿನ ಗುಣ ಮತ್ತು ಹೆಚ್ಚುಗಾರಿಕೆ ಎಂದು ಖ್ಯಾತ ಕಾದಂಬರಿಕಾರ ಸಾಹಿತಿ ಕೆ.ಟಿ. ಗಟ್ಟಿ ಅವರು ನುಡಿದರು.

ವಿಶ್ವೇಶ್ವರಯ್ಯ ಮಂದಿರದಲ್ಲಿ ನಡೆದ ಎಂಟನೇ ತುಳು ಪರ್ಬದ ಎರಡನೇ ದಿನದ ಕಾರ್ಯಕ್ರಮದಲ್ಲಿ ಕನ್ನಡ ವಿಭಾಗವು ಪ್ರಾಯೋಜಿಸಿದ 'ಎಂ.ಎನ್. ಅಮೀನ್ ದತ್ತಿ ಕಾರ್ಯಕ್ರಮ'ದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಮುಂಬಯಿಯಲ್ಲಿ ನಡೆಯುತ್ತಿರುವ ತುಳು ಪರ್ಬ ಮುಂದಿನ ವರ್ಷಗಳಲ್ಲಿ ಇಲ್ಲಿನ ಎಲ್ಲ ಸಂಘ ಸಂಸ್ಥೆಗಳ ಕೊಡುಗೆಯಿಂದ ಬೃಹತ್ ಉತ್ಸವದ ರೂಪದಲ್ಲಿ ನಡೆಯುವಂತಾಗಬೇಕು. ಅದು ನಮ್ಮ ಸಂಸ್ಕೃತಿ, ಸಂಸ್ಕಾರಗಳ ಬಗ್ಗೆ ನಮಗಷ್ಟೇ ತಿಳಿಸುವ ವೇದಿಕೆಯಾಗದೆ, ಸ್ಥಳೀಯರೂ ಪಾಲ್ಗೊಂಡು ನಮ್ಮ ಬಗ್ಗೆ ತಿಳಿಯುವಂತಾಗಬೇಕು ಎಂದು ಅವರು ನುಡಿದರು.

'ಪರಿಸರ ಪ್ರೇಮ'ದ ಕುರಿತು ಉದ್ಯಮಿ, 'ಜಯ ಶ್ರೀಕೃಷ್ಣ ಪರಿಸರ ಪ್ರೇಮ ಸಮಿತಿ'ಯ ಸಂಸ್ಥಾಪಕ ಶ್ರೀ ಜಯಕೃಷ್ಣ ಶೆಟ್ಟಿ, 'ಭಾಷೆ ಬೊಕ್ಕ ಪರಿಸರ'ದ ಬಗ್ಗೆ ಕತೆಗಾರ್ತಿ ಶ್ರೀಮತಿ ಮಿತ್ರಾ ವೆಂಕಟ್ರಾಜ್, 'ನಾಟಕ ರಂಗ'ದ ಕುರಿತು ಅಕ್ಷಯ ಮಾಸ ಪತ್ರಿಕೆಯ ಉಪ ಸಂಪಾದಕ ಹರೀಶ್ ಹೆಜ್ಮಾಡಿ, ಸ್ತ್ರೀವಾದದ ಕುರಿತು ಶೀಲಾ ಕೆ. ಶೆಟ್ಟಿ ಎರ್ಮಾಳು ಹಾಗೂ 'ಮುಂಬಯಿ ತುಳು ಬರಹಗಾರರ'ರ ಬಗೆಗೆ ಬಂಟರ ವಾಣಿ ಸಂಪಾದಕ ಪ್ರೇಮ್‌ನಾಥ್ ಶೆಟ್ಟಿ ಮುಂಡ್ಕೂರು ಇವರು ವಿವರವಾದ ಉಪನ್ಯಾಸ ನೀಡಿದರು.

ಕನ್ನಡ ವಿಭಾಗದ ಉಪನ್ಯಾಸಕ ಗಣೇಶ್ ಉಪಾಧ್ಯ ಕಿರಾಡಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಎಚ್.ಬಿ.ಎಲ್. ರಾವ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

### ವಚನ ಕಮ್ಮಟ ಪರೀಕ್ಷೆ ಶ್ರೀ ಡಿಸೋಜ ಪ್ರಥಮ

ಮುಂಬಯಿ ಬಸವ ಕೇಂದ್ರ, ಶ್ರೀ ಮುರುಗ ರಾಜೇಂದ್ರಮಠ ಚಿತ್ರದುರ್ಗ ಇವರು ನಡೆಸಿದ ಈ ಬಾರಿಯ ವಚನ ಕಮ್ಮಟ ಪರೀಕ್ಷೆಯಲ್ಲಿ ಕನ್ನಡ

ವಿಭಾಗ ಮುಂಬಯಿ ವಿಶ್ವ ವಿದ್ಯಾಲಯದ ಶ್ರೀ ಡಿಸೋಜ ರೆಜಿನಾಲ್ಡ್ ದಮಸುಸ್ ಜೋನ್ ಅವರು ಮೊದಲ ಸ್ಥಾನ ಗಳಿಸಿದ್ದಾರೆ.

ಇದೇ ಮೊದಲ ಬಾರಿಗೆ ಶ್ರೀ ಮುರುಘರಾಜೇಂದ್ರ ಮಠವು ಕನ್ನಡ ವಿಭಾಗ ಮುಂಬಯಿ ವಿಶ್ವ ವಿದ್ಯಾಲಯವನ್ನು ಪರೀಕ್ಷಾ ಕೇಂದ್ರವೆಂದು ಆಯ್ಕೆ ಮಾಡಿದೆ. ಎಂ.ಎ. ಪ್ರಥಮ ಹಾಗೂ ದ್ವಿತೀಯ ವರ್ಷದ ಸುಮಾರು 14 ಮಂದಿ ಈ ಬಾರಿಯ ಪರೀಕ್ಷೆಗೆ ಹಾಜರಾಗಿದ್ದಾರೆ.

ಎಂ.ಎ. ಪ್ರಥಮ ವರ್ಷದ ಅಹಲ್ಯಾ ಬಲ್ಲಾಳ್ ಅವರು ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ಈ ಇಬ್ಬರು ವಿದ್ಯಾರ್ಥಿಗಳು ವಿಶೇಷ ಪ್ರಶಸ್ತಿ ಪತ್ರಕ್ಕೂ ಅರ್ಹತೆ ಸಾಧಿಸಿದ್ದಾರೆ ಎಂದು ಚಿತ್ರದುರ್ಗದ ಬಸವ ಕೇಂದ್ರ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಕಳೆದ ಅನೇಕ ವರ್ಷಗಳಿಂದ ಈ ಪರೀಕ್ಷೆಯನ್ನು ಶ್ರೀ ಮುರುಘ ರಾಜೇಂದ್ರ ಮಠ ನಡೆಸಿಕೊಂಡು ಬಂದಿದ್ದು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ, ಅವರಲ್ಲಿ ಪರಸ್ಪರ ಮಿತ್ರತ್ವಭಾವ ಹಾಗೂ ವೈಚಾರಿಕತೆಯನ್ನು ಮೂಡಿಸಲು ಸಹಾಯಕವಾಗಿದೆ.

ಪ್ರತಿ ವರ್ಷ ಜನವರಿಯಲ್ಲಿ ನಡೆಯುವ ವಚನ ಕಮ್ಮಟ ಪರೀಕ್ಷೆಗಳ ಕುರಿತು ಹೆಚ್ಚಿನ ಮಾಹಿತಿಯನ್ನು ಮುಖ್ಯಸ್ಥರು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಇವರಿಂದ ಪಡೆದುಕೊಳ್ಳಬಹುದೆಂದು ವಿಭಾಗದ ಪ್ರಕಟಣೆ ತಿಳಿಸಿದೆ.

ಐದನೇ ತರಗತಿಯಿಂದ ಪದವಿ, ಸ್ನಾತಕೋತ್ತರ, ಎಂ.ಬಿ.ಬಿ.ಎಸ್., ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೂ ವಿವಿಧ ರೀತಿಯ ಪರೀಕ್ಷೆಗಳನ್ನು ಚಿತ್ರದುರ್ಗದ ಮುರುಘ ರಾಜೇಂದ್ರ ಮಠವು ನಡೆಸುತ್ತಿದೆ.

**ದಿಲ್ಲಿಯಲ್ಲಿ ಯಶಸ್ವಿಯಾಗಿ ನಡೆದ ರಾಷ್ಟ್ರೀಯ ಕನ್ನಡ ಸಮ್ಮೇಳನ ಕನ್ನಡ ಬೆಳೆಸಲು ಕರೆ**

• ನವದೆಹಲಿ: ದಿಲ್ಲಿಯಲ್ಲಿ ಎಪ್ರಿಲ್ 7 ಮತ್ತು 8ರಂದು 18ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. 'ದೆಹಲಿ ಕನ್ನಡಿಗ' ಮಾಸ ಪತ್ರಿಕೆ ಆಶ್ರಯದಲ್ಲಿ ನಡೆದ ಈ ಸಮ್ಮೇಳನದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತಲ್ಲದೆ ದೇಶದಾದ್ಯಂತದಿಂದ ಸಾಹಿತಿಗಳು, ಕಲಾವಿದರು,



*(ಚಿತ್ರದಲ್ಲಿ ಕರ್ನಾಟಕದ ಸಚಿವೆ ಶ್ರೀಮತಿ ನಫೀಸ್ ಫಜಲ್ ದೀಪ ಬೆಳಗಿ ಸಮ್ಮೇಳನವನ್ನು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಬಾ. ಸಾಮಗ, ಡಾ। ಪಿ.ವಿ. ಇಂದಿರೇಶನ್, ಡಾ। ಎ. ರಮೇಶ ರಾವ್, ಎನ್. ವಿಠ್ಠಲ್, ಡಾ।ಎನ್. ಆರ್. ಶೆಟ್ಟಿ, ನೀರಜ ರಾಜ್‌ಕುಮಾರ್, ಡಾ। ಎಲ್. ಸಿದ್ದವೀರೇಗೌಡ, ಆಸ್ಕರ್ ಫೆರ್ನಾಂಡಿಸ್ ಅವರನ್ನು ಕಾಣಬಹುದು)*

ಪ್ರಾಧ್ಯಾಪಕರು, ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ ಒಂದು ಸಾವಿರ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮ್ಮೇಳನ ಉದ್ಘಾಟಿಸಿದ ಕರ್ನಾಟಕದ ವೈದ್ಯಕೀಯ ಶಿಕ್ಷಣ ಸಚಿವೆ ಶ್ರೀಮತಿ ನಫೀಸ್ ಫಜಲ್ ಅವರು ಭಾಷಾ ಬಾಂಧವ್ಯದೊಂದಿಗೆ ಕನ್ನಡಿಗರು ಕರ್ನಾಟಕದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಯನ್ನು ಬೆಳೆಸಬೇಕೆಂದು ಕರೆ ನೀಡಿದರಲ್ಲದೆ ಕರ್ನಾಟಕದಲ್ಲಿ ಕನ್ನಡ ಭಾಷೆ ಎಲ್ಲಾ ಜಾತಿ ಮತ ಪ್ರದೇಶಗಳವರನ್ನು ಒಟ್ಟುಗೂಡಿಸಿದೆಯೆಂದರು.

ಸಮ್ಮೇಳನದ ಸಂಚಾಲಕ ಬಾ. ಸಾಮಗ ಅವರು ಕನ್ನಡಕ್ಕೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ಹೆಚ್ಚಿನ ಮಾನ್ಯತೆ, ಗೌರವ ದೊರಕಿಸಿ ಕನ್ನಡಿಗರಿಗೆ ಎಲ್ಲ ರಂಗಗಳಲ್ಲಿ ದೊರಕಬೇಕಾದ ನ್ಯಾಯವನ್ನು ಸರಿಯಾಗಿ ದೊರಕಿಸುವುದೇ ಸಮ್ಮೇಳನದ ಉದ್ದೇಶವಾಗಿದೆಯೆಂದರಲ್ಲದೆ ಇದಕ್ಕಾಗಿ ಕೇಂದ್ರ ಸರಕಾರ ನನೆಗುದಿಯಲ್ಲಿರುವ ಕರ್ನಾಟಕದ ಎಲ್ಲ ಯೋಜನೆಗಳಿಗೆ ಅನುಮತಿ ನೀಡಿ ಕಾರ್ಯಗತಗೊಳಿಸಬೇಕೆಂದರು.

ದೆಹಲಿ ಕನ್ನಡಿಗ ಸಮ್ಮೇಳನ ಸಂಚಿಕೆ ಬಿಡುಗಡೆ ಮಾಡಿದ ಕೇಂದ್ರ ಜಾಗೃತ ಆಯುಕ್ತ ಎನ್. ವಿಠ್ಠಲ್ ಅವರು ಆಧುನಿಕ ತಂತ್ರಜ್ಞಾನಗಳಿಂದ ಕನ್ನಡವನ್ನು ಪ್ರಗತಿಪಡಿಸುವುದು ಅಗತ್ಯವೆಂದರಲ್ಲದೆ ಕನ್ನಡತನವನ್ನು ರಕ್ತಗತವಾಗಿರಿಸಬೇಕೆಂದರು. ಲೋಕಸೇವಾ ಆಯೋಗದ ಸದಸ್ಯ ಡಾ। ಎಲ್. ಸಿದ್ದವೀರೇ ಗೌಡ ಅವರು ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಹೊರನಾಡಿನಲ್ಲೂ ಬೆಳೆಸಬೇಕೆಂದರಲ್ಲದೆ ಕನ್ನಡಕ್ಕಾಗಿ ದುಡಿದವರನ್ನು ಮರೆಯಬಾರದೆಂದರು. ಕರ್ನಾಟಕದ ದಿಲ್ಲಿ ನಿವಾಸಿ ಆಯುಕ್ತೆ ಶ್ರೀಮತಿ ನೀರಜ ರಾಜ್‌ಕುಮಾರ್ ಅವರು ಕರ್ನಾಟಕ ಸರಕಾರದ ಕರ್ನಾಟಕದ ಪ್ರಗತಿಗೆ ಸಂಪೂರ್ಣ ಬದ್ಧವಾಗಿ ದುಡಿಯುತ್ತಿದೆ ಎಂದರು. ರಾಜ್ಯಸಭಾ ಸದಸ್ಯ ಆಸ್ಕರ್ ಫೆರ್ನಾಂಡಿಸ್ ಅವರು ಎಲ್ಲ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು ಕನ್ನಡಿಗರು ಕನ್ನಡತನವನ್ನು ಮುಂದಿನ ಜನಾಂಗಕ್ಕೂ ವರ್ಗಾಯಿಸಬೇಕೆಂದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರು ವಿಶ್ವ ವಿದ್ಯಾನಿಲಯದ ಮಾಜಿ ಕುಲಪತಿಗಳೂ, ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಕಾರ್ಯದರ್ಶಿಗಳೂ ಆದ ಡಾ। ಎನ್.ಆರ್. ಶೆಟ್ಟಿ ಅವರು ಕನ್ನಡದ ಶ್ರೇಷ್ಠ ಕೃತಿಗಳನ್ನು ಬೇರೆ ಭಾಷೆಗಳಿಗೆ ತರ್ಜುಮೆ ಮಾಡುವುದು ಆವಶ್ಯವೆಂದರಲ್ಲದೆ ಕನ್ನಡ ನಾಡಿನ ಶ್ರೇಷ್ಠತೆಯನ್ನು, ಕನ್ನಡತನವನ್ನು ಅಖಂಡ ಭಾರತ ಸಂಸ್ಕೃತಿಯ ಅವಿಭಾಜ್ಯ ಅಂಗ ಎಂದು ಕನ್ನಡದವರು ಭಾವಿಸಬೇಕೆಂದರು. ಹೊರನಾಡ ಕನ್ನಡಿಗರು ಕನ್ನಡದ ಸಾಂಸ್ಕೃತಿಕ ರಾಯಭಾರಿಗಳಾಗಿ ಕಾರ್ಯ ನಿರ್ವಹಿಸಬೇಕೆಂದ ಶೆಟ್ಟಿ ಅವರು ಕೇಂದ್ರ ಸರಕಾರದಿಂದ ಕನ್ನಡಿಗರು ಸರಿಯಾದ ಸೌಲಭ್ಯ ಪಡೆಯಲು ಕರ್ನಾಟಕ ಸರಕಾರ ದಿಲ್ಲಿಯಲ್ಲಿ ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಬೇಕೆಂದರು.

**ಪ್ರಶಸ್ತಿ ವಿತರಣೆ:** ಸಮ್ಮೇಳನದಲ್ಲಿ ಚೆನ್ನೈನ ಐ.ಐ.ಟಿ.ಯ ಮಾಜಿ ನಿರ್ದೇಶಕರಾದ ಪದ್ಮಭೂಷಣ ಡಾ। ಪಿ.ವಿ. ಇಂದಿರೇಶನ್ ಅವರಿಗೆ 'ಶ್ರೇಷ್ಠ ಹೊರನಾಡ ಕನ್ನಡಿಗ', ಜವಾಹರಲಾಲ್ ನೆಹರೂ ವಿಶ್ವ ವಿದ್ಯಾನಿಲಯದ ಪ್ರಾಧ್ಯಾಪಕ ಡಾ। ಎ. ರಮೇಶ ರಾವ್ ಅವರಿಗೆ 'ಶ್ರೇಷ್ಠ ದಿಲ್ಲಿ ಕನ್ನಡಿಗ', ಸಿಂಡಿಕೇಟ್

Regn. No. 040015/66
Regn. No. TECH/47-202/MBI-2001
Date of Posting : 10-5-2001

ಬ್ಯಾಂಕಿನ ಆಡಳಿತ ನಿರ್ದೇಶಕ ಹಾಗೂ ಅಧ್ಯಕ್ಷ ಡಿ.ಟಿ. ಪೈ ಅವರಿಗೆ ಟಿ.ಎ. ಪೈ ಸ್ಮಾರಕ 'ಶ್ರೇಷ್ಠ ಬ್ಯಾಂಕರ್' ಪ್ರಶಸ್ತಿಗಳನ್ನು ನೀಡಲಾಯಿತು.

ಕೇಂದ್ರದ ಮಾಜಿ ಕಾರ್ಯದರ್ಶಿ ಡಾ। ಸರಳಾ ಗೋಪಾಲನ್ ಅವರು ಉದ್ಘಾಟಿಸಿದ ಮಹಿಳಾ ಉತ್ಸವದ ಅಧ್ಯಕ್ಷತೆಯನ್ನು ಶ್ರೀಮತಿ ವನಿತಾ ಗೌಡ ಅವರು ವಹಿಸಿದ್ದು ಗಣನೀಯ ಸೇವೆ ಸಲ್ಲಿಸಿದ ಶ್ರೀಮತಿಯರಾದ ಎಸ್.ಆರ್. ಸರಸ್ವತಿ, ಕಾಂತಿ ಅತ್ರೆ, ಪದ್ಮ ಕಾಶೀಪತಿ, ಸುಶೀಲಾಬಾಯಿ ಮರಾಠೆ, ರಂಗನಾಯಕಿ, ಮೀರಾನಾಡಿಗ್, ಪ್ರತಿಮಾ ಪೈ, ಕು. ಅರ್ಪಿತ, ಕು. ನೂಪುರ್ ಅವರುಗಳನ್ನು ಸನ್ಮಾನಿಸಲಾಯಿತು. ಗ್ರಂಥ ಪಾಲಕ ಬಿ.ಎನ್. ರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಗಣನೀಯ ಸೇವೆ ಸಲ್ಲಿಸಿದ ಡಾ। ಪಿ.ಎಚ್. ಸೇತುಮಾಧವ ರಾವ್, ವೇಮಗಲ್ ಸೋಮಶೇಖರ್, ಟಿ.ಎಸಂ. ಪ್ರಭುದೇವಯ್ಯ, ಡಾ। ವಿ.ಬಿ. ದೇಶಪಾಂಡೆ, ಎಂ.ಸಿ. ವೆಂಕಟೇಶ, ಎಸ್.ಎಂ. ಅಡಿಗ ಅವರುಗಳನ್ನು ಸನ್ಮಾನಿಸಲಾಯಿತು.

**ದಿಲ್ಲಿಯಲ್ಲಿ ಟಿಪ್ಪು ಜನ್ಮದಿನೋತ್ಸವ**
**ನಾಡು, ನುಡಿ, ಸಂಸ್ಕೃತಿ ರಕ್ಷಣೆಗೆ ಕರೆ**

ನವದೆಹಲಿ: ತನ್ನ ನಾಡಿನ ರಕ್ಷಣೆಗೆ ಬ್ರಿಟಿಷರ ವಿರುದ್ಧ ಹೋರಾಡಿ ಮಡಿದ ಮೈಸೂರಿನ ಹುಲಿ ಎಂದೇ ಖ್ಯಾತನಾದ ಟಿಪ್ಪು ಸುಲ್ತಾನನ ಆದರ್ಶವನ್ನನುಸರಿಸಿ ಕನ್ನಡಿಗರು ವಿದೇಶಿ ಸಂಸ್ಕೃತಿಯ ವ್ಯಾಮೋಹಕ್ಕೊಳಗಾಗದೆ ತಮ್ಮ ನಾಡು, ನುಡಿ, ಸಂಸ್ಕೃತಿಯ ರಕ್ಷಣೆ ಮಾಡಬೇಕೆಂದು 'ದೆಹಲಿ ಕನ್ನಡಿಗ' ಪತ್ರಿಕೆ ಸಂಪಾದಕ ಬಾ. ಸಾಮಗ ಅವರು ಕರೆ ನೀಡಿದರು.

ದಿಲ್ಲಿಯಲ್ಲಿ ಡಿಸೆಂಬರ್ 30ರಂದು ನಡೆದ ಟಿಪ್ಪು ಸುಲ್ತಾನ್ (1750-99) ಜನ್ಮದಿನೋತ್ಸವ ಸಮಾರಂಭವನ್ನು ಉದ್ಘಾಟಿಸಿ ಸಾಮಗ ಅವರು ಮಾತನಾಡುತ್ತಿದ್ದರು.

ಇಂಗ್ಲೀಷರನ್ನು ಭಾರತದಿಂದ ಓಡಿಸುವುದೇ ಪರಮ ಧ್ಯೇಯವಾಗಿರಿಸಿಕೊಂಡ ಟಿಪ್ಪುವಿಗೆ ರಾಷ್ಟ್ರ ಮಟ್ಟದಲ್ಲಿ ಸ್ಮಾರಕ ಸ್ಥಾಪಿಸುವುದು ಅಗತ್ಯವೆಂದ ಸಾಮಗ ಅವರು ದಿಲ್ಲಿಯಲ್ಲಿ ಟಿಪ್ಪುವಿನ ಮೂರ್ತಿ ಪ್ರತಿಷ್ಠಾಪಿಸಬೇಕೆಂದರಲ್ಲದೇ ಕೇಂದ್ರ ಸರಕಾರವು ಮೈಸೂರು-ದಿಲ್ಲಿ ನಡುವೆ ಪ್ರತಿನಿತ್ಯ ಎಕ್ಸ್‌ಪ್ರೆಸ್ ರೈಲು ಓಡಿಸಿ ಅದಕ್ಕೆ ಟಿಪ್ಪುವಿನ ಹೆಸರನ್ನಿಡಬೇಕೆಂದು ಆಗ್ರಹಪಡಿಸಿದರು. ಕರ್ನಾಟಕ ಸರಕಾರ ದಿಲ್ಲಿಯಲ್ಲಿ ಟಿಪ್ಪು ಸ್ಮಾರಕ ಕರ್ನಾಟಕ ಐತಿಹಾಸಿಕ ಸಾಂಸ್ಕೃತಿಕ ಸಂಗ್ರಹಾಲಯ ಸ್ಥಾಪಿಸಬೇಕೆಂದ ಸಾಮಗ ಅವರು ರಾಷ್ಟ್ರಮಟ್ಟದಲ್ಲಿ ಟಿಪ್ಪು ಸ್ಮಾರಕ ಉತ್ಸವ ನಡೆಸಿ ನಾಡ ಪ್ರೇಮ ರಕ್ಷಣಾ ಜಾಗೃತಿ ಮೂಡಿಸಬೇಕೆಂದರು.

ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಲೋಕಸೇವಾ ಸದಸ್ಯ ಡಾ। ಎಲ್. ಸಿದ್ಧವೀರೇಗೌಡ ಅವರು ಟಿಪ್ಪುವಿನ ಕೆಲವು ಧೋರಣೆಗಳ ಕುರಿತು ವಿವಾದಕ್ಕೆಳಿಯದೆ ತಮ್ಮ ತಾಯ್ನಾಡನ್ನು ಪ್ರೀತಿಸುವ ಟಿಪ್ಪುವಿನ ಉತ್ತಮ ಗುಣದಿಂದ ಕನ್ನಡಿಗರು ಸ್ಫೂರ್ತಿ ಪಡೆಯಬೇಕೆಂದರು.


ಸಿ.ಬಿ.ಐ.ನ ಮಾಜಿ ನಿರ್ದೇಶಕ ಜೋಗಿಂದರ್ ಸಿಂಗ್ ಅವರು ಆಡಳಿತದಲ್ಲಿ ಹೆಚ್ಚು ಆಸಕ್ತನಾಗಿದ್ದ ಟಿಪ್ಪು ಮದ್ಯಪಾನವನ್ನು ನಿಷೇಧಿಸಿದ್ದನೆಂದರಲ್ಲದೆ ಬ್ರಿಟಿಷರನ್ನು ಬೆಂಬಲಿಸಿದವರನ್ನು ಶಿಕ್ಷಿಸುವಲ್ಲಿ ಟಿಪ್ಪು ಹಿಂಜರಿಯಲಿಲ್ಲವೆಂದರು.

ಪಂಜಾಬ್ ನ್ಯಾಷನಲ್ ಬ್ಯಾಂಕಿನ ಜನರಲ್ ಮ್ಯಾನೇಜರ್ ಕೆ.ಎನ್. ಪೃಥ್ವಿರಾಜ್ ಅವರು ಹಲವಾರು ಆರ್ಥಿಕ ಸುಧಾರಣೆಗಳನ್ನು ಮಾಡಿದ ಟಿಪ್ಪು ಆಗಿನ ಮೈಸೂರು ರಾಜ್ಯವನ್ನು 18ನೇ ಶತಮಾನದ ಸಮೃದ್ಧ ಹಾಗೂ ಪ್ರಗತಿಶೀಲ ರಾಜ್ಯವನ್ನಾಗಿಸುವಲ್ಲಿ ಸಫಲನಾಗಿದ್ದನೆಂದರಲ್ಲದೆ ಪ್ರಜೆಗಳ ಆರ್ಥಿಕ ಹಿತಚಿಂತನೆಯೇ ಸರಕಾರದ ಮುಖ್ಯ ಗುರಿಯಾಗಿರಬೇಕೆಂದರು.

ವಿಶ್ವಭಾರತಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ। ಎಸ್. ಅನಂತರಾಂ ಅವರು ಶಿಕ್ಷಕರು ವಿದ್ಯಾರ್ಥಿಗಳಿಗೆ ಟಿಪ್ಪುವಿನ ಆದರ್ಶವನ್ನು ಮನದಟ್ಟು ಮಾಡಿಸಿ ಮುನ್ನಡೆಸಬೇಕೆಂದರಲ್ಲದೆ ವಿಶ್ವ ಮಟ್ಟದಲ್ಲಿ ಟಿಪ್ಪು ಕನ್ನಡಿಗರಿಗೆ ಗೌರವ ತಂದಿರುವನೆಂದರು.

ಅಧ್ಯಕ್ಷತೆ ವಹಿಸಿದ್ದ ಇತಿಹಾಸಕಾರ, ಭಾರತೀಯ ಪುರಾತತ್ವ ಇಲಾಖೆಯ ಮಾಜಿ ಮುಖ್ಯ ಗ್ರಂಥಪಾಲಕ ಎಚ್. ಸುಬ್ಬಣ್ಣಾಚಾರ್ ಅವರು ಟಿಪ್ಪುವಿನ ಸ್ವಾಭಿಮಾನ ಕನ್ನಡತನದ ಲಕ್ಷಣವಾಗಿದೆ ಎಂದರಲ್ಲದೆ ಜಾತಿ, ಧರ್ಮ, ಪಂಥವನ್ನು ಮೀರಿ ಟಿಪ್ಪು ಕುರಿತು ಸತ್ಯ ನಿಷ್ಠ ಸಂಶೋಧನೆ ನಡೆಸಿ ಕರ್ನಾಟಕದ ರಾಜಕೀಯ ಇತಿಹಾಸವನ್ನು ಪುನರ್ ವಿಮರ್ಶಿಸಿ ಬರೆಯಬೇಕೆಂದರು.

ಟಿಪ್ಪುವಿಗೆ ಸಂಬಂಧಿಸಿ ಪುಸ್ತಕ ಹಾಗೂ ಚಿತ್ರಗಳ ಸಂದರ್ಶನ ಏರ್ಪಡಿಸಲಾಗಿತ್ತು.




ಶ್ರೀಮತಿ ಜಯಶ್ರೀ ಅರವಿಂದರ ವೀಣಾವಾದನ ಕಛೇರಿ

**TRIMURTI**
JEWELLERS
GOLD AND DIAMOND ORNAMENTS
460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.) Mumbai-19.
Phone : 402 34 85

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38